# ಮೊದಲನೇ ಪುಟದಿಂದ.....

## ಜಯಂತಿ ಕಾರ್ಯಕ್ರಮ ಪೂರ್ವಭಾವಿ ಸಭೆ

ಇಲಾಖೆಗಳ ತಾಲೂಕು ಮಟ್ಟದ ಅಧಿಕಾರಿಗಳು ಭಾಗವಹಿಸಬೇಕು ಎಂದು ತಿಳಿಸಿದರು.ಪೂರ್ವಭಾವಿ ಸಭೆಯಲ್ಲಿ ಶ್ರೀ ಭಗವಾನ್ ಮಹಾವೀರ ಜಯಂತಿ ಆಚರಣೆ ಕುರಿತು ಜೈನ ಸಮುದಾಯದ ಮುಖಂಡರಾದ ಸಂತೋಷಜೈನ,ಮಹಾವೀರ ಜೈನ್ ಹಾಗೂ ದೇವರ ದಾಸಿಮಯ್ಯ ಜಯಂತಿ ಆಚರಣೆ ಕುರಿತು ಸುಭಾಷಚಂದ್ರ,ಬಸವರಾಜ ಮಸ್ಕಿ,ಗಂಗಾಧರ, ಶರಣಮ್ಮ ಕಾವಟಿಗಿ,ಭೋಗೇಶ.ಟಿ, ಚನ್ನಬಸಪ್ಪ, ಪ್ರಧಾನ,ಶಿವಕುಮಾರ ಜಿ. ಸುಬ್ಬಯ್ಯ, ಶಿವಶರಣೆ ಅಕ್ಕಮಹಾದೇವಿ ಜಯಂತಿ ಕುರಿತು ದೊಡ್ಡಯ್ಯ ಹೂಗಾರ, ಮಹಮ್ಮದ್ ಮುಜೀಬ್, ತಮ್ಮ ಅಭಿಪ್ರಾಯಗಳನ್ನು ತಿಳಿಸಿದರು.ತಾಲೂಕು ಆರೋಗ್ಯಾಧಿಕಾರಿ ಡಾ.ಶರಣಬಸವರಾಜ, ಅಗ್ನಿ ಶಾಮಕ ಅಧಿಕಾರಿ ಹಾಜೀಮಿಯ, ಶಿಶುಅಭಿವೃದ್ಧಿ ಅಧಿಕಾರಿ ಮನ್ಸೂರ್ ಅಹಮ್ಮದ್ ,ಉಪತಹಸೀಲ್ದಾರ್ ವಿನಾಯಕರಾವ್, ಸೇರಿದಂತೆ ಇನ್ನತರರು ಇದ್ದರು.

## ವಿಶ್ವ ಕ್ಷಯರೋಗ ದಿನಾಚರಣೆ

ಡಾ.ಮನೋಹರ್ ಪತ್ತಾರ್ ಮಾತನಾಡಿದರು.ಕಾರ್ಯಕ್ರಮದಲ್ಲಿ ಆ ಸಾಂಕ್ರಮಿಕ ರೋಗಗಳ ನಯಂತ್ರಣ ವಿಭಾಗದ ವೈದ್ಯಾಧಿಕಾರಿಗಳಾದ ಡಾ.ಚಂದ್ರಶೇಖರ್ ಪಾಟೀಲ್,ಆರೋಗ್ಯ ಶಿಕ್ಷಣಾಧಿಕಾರಿಗಳಾದ ಬಾಬು ಚಿನ್ನು,ಬಾಲಪ್ಪನಾಯಕ,ಮನೋಚೈತನ್ಯ ವಿಭಾಗದ ಗುರುರಾಜ ಕುಲಕರ್ಣಿ,ದೀಪಾ,ಕ್ಷಯರೋಗ ಘಟಕದ ಮೇಲ್ವಿಚಾರಕರಾದ ಶಿವರಾಜ,ಪ್ರೇಮ ಪ್ರಸಾದ,ನವೀನ್ ಕುಮಾರ್, ಆಶಾ ಕಾರ್ಯಕರ್ತೆಯರು ಸೇರಿದಂತೆ ಇನ್ನತರರು ಇದ್ದರು.

## ಕಾನೂನು ಅರಿವು ಕಾರ್ಯಕ್ರಮ

ಬಾಲಕಾರ್ಮಿಕ ಯೋಜನೆಯ ಯೋಜನಾ ನರ್ದೇಶಕರಾದ ಮಂಜುನಾಥರೆಡ್ಡಿ ರವರು ಬಾಲ ಕಾರ್ಮಿಕ ಹಾಗೂ ಕಿಶೋರ ಕಾರ್ಮಿಕತೆ ನರ್ಮೂಲನೆ ವಿಷಯ ಕುರಿತು ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಮಾನ್ಯ ವೃತ್ತ ಕಾರ್ಮಿಕ ನರೀಕ್ಷಕರಾದ ಮಲ್ಲಪ್ಪದೊರೆ. ತಾ.ಮಹಿಳಾ ಮತ್ತು ಮಕ್ಕಳ ಕಲ್ಯಾಧಿಕಾರಿ ಮನ್ಸೂರ್ ಅಹಮ್ಮದ್, ತಾಲೂಕು ನ್ಯಾಯವಾದಿಗಳ ಸಂಘದ ಪ್ರ,ಕಾರ್ಯದರ್ಶಿಗಳಾದ ಚನ್ನಬಸವನಾಯಕ ವಕೀಲರು ಬಲ್ಲಟಗಿ, ವಿಶ್ವನಾಥ ಪಾಟೀಲ್ ವಕೀಲರು,ಮುಖಂಡರಾದ ಜಯಪ್ರಕಾಶ,ಪಿ.ರವಿಕುಮಾರ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಕಾರ್ಮಿಕರು ಇದ್ದರು.

## ಶ್ರೀಅಡವಿಸಿದ್ದೇಶ್ವರ ಜ್ಯೋತಿ ರಥಯಾತ್ರೆಯನ್ನು ಬರಮಾಡಿಕೊಂಡ ಭಕ್ತರು

ವೀರಶೈವ ಲಿಂಗಾಯತ ಸಮಾಜದ ಮುಖಮಡರಾದ ಉಮೇಶರೆಡ್ಡಿ, ಗುರುಸಿದ್ದಪ್ಪ ಕಣ್ಣೂರು, ಉದಯ, ವಿಶ್ವನಾಥಗೌಡ,ಹನುಮಂತರೆಡ್ಡಿ. ಶಿವಗ್ಯಾನಿ, ವಿರುಪಣ್ಣ, ಪಂಪಣ್ಣ ಸೇರಿದಂತೆ ಪಟ್ಟಣದ ಭಕ್ತರು ಸೇರಿದಂತೆ ಇನ್ನಿತರರು ಇದ್ದರು.

## ರಾಜ್ಯ ರಾಜಕೀಯದಲ್ಲಿ ರೋಚಕ ಬೆಳವಣಿಗೆ, ಕುತೂಹಲ ಕೆರಳಿಸಿದ ಸತೀಶ್-ಎಚ್‌ಡಿಕೆ ಭೇಟಿ

ಸೃಷ್ಟಿಸಿದ್ದವು.ಇದಕ್ಕೆ ಪ್ರತಿಯಾಗಿ ಡಿ.ಕೆ.ಶಿವಕುಮಾರ್‌ರವರ ಬೆಂಬಲಿಗರು ಎರಡೂವರೆ ವರ್ಷದ ಬಳಿಕ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗುತ್ತಾರೆ ಎಂದು ಹೇಳಿಕೆ ನೀಡುವ ಮೂಲಕ ಕೌಂಟರ್ ನೀಡುತ್ತಿದ್ದರು.ಈ ಎಲ್ಲಾ ಚರ್ಚೆಗಳ ನಡುವೆಯೇ ಈಗ ದೆಹಲಿಯ ಡಿನ್ನರ್ ಮೀಟಿಂಗ್ ಭಾರಿ ಸಂಚಲನ ಮೂಡಿಸಿದೆ. ಈ ಮೊದಲು ಜೆಡಿಎಸ್?, ಕಾಂಗ್ರೆಸ್?ನ ಸಮಿಶ್ರ ಸರ್ಕಾರದ ಪತನಕ್ಕೆ ಬೆಳಗಾವಿಯೇ ಮೂಲ ಕಾರಣವಾಗಿತ್ತು. ಸತೀಶ್ ಜಾರಕಿಹೊಳಿಯವರ ಸಹೋದರ ರಮೇಶ್ ಜಾರಕಿಹೊಳಿ ಆಪರೇಷನ್ ಕಮಲದ ಮುನ್ನುಡಿ ಬರೆದರು. ಸರ್ಕಾರವನ್ನೆ? ಬದಲಾಯಿಸಿದರು.ಬೆಳಗಾವಿ ರಾಜ್ಯ ರಾಜಕಾರಣ ಕರ್ನಾಟಕದ ಮಟ್ಟಿಗೆ ಸದಾಕಾಲ ಸ್ಫೋ?ಟಕ್ಕೂ ಮುನ್ನ ಅವಿತು ಕುಳಿತ ಜ್ವಾಲಾಮುಖಿಯಾಗಿರುತ್ತದೆ. ಸತೀಶ್ ಜಾರಕಿಹೊಳಿ ರಾಜ್ಯ ರಾಜಕಾರಣದಲ್ಲಿ ಸೈಲೆಂಟ್ ಕಿಲ್ಲರ್ ಎಂದೇ ಬಿಂಬಿಸಿಕೊಳ್ಳುತ್ತಾರೆ. ಅಪರೂಪಕ್ಕೊಮೆ ಮಾತನಾಡುವ ಸತೀಶ್ ಜಾರಕಿಹೊಳಿಯವರ ಹೇಳಿಕೆಯ ಹಿಂದೆ ನಾನಾ ರೀತಿಯ ಗೂಡಾರ್ಥಗಳಿರುತ್ತವೆ.ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಹಾಗೂ ಉಪಮುಖ್ಯಮಂತ್ರಿ ಹೆಚ್ಚುವರಿ ಹುದ್ದೆಗಳ ವಿಚಾರವಾಗಿ ಸತೀಶ್ ಜಾರಕಿಹೊಳಿ ತಣ್ಣಗೆ ಹೇಳಿಕೆಗಳನ್ನು ನೀಡುವ ಮೂಲಕ ರಾಜಕಾರಣವನ್ನು ಕಾವೇರಿಸಿದ್ದರು. ಹನಿಟ್ರ್ಯಾಪ್ ಪ್ರಕರಣ ಬಹಿರಂಗ ಚರ್ಚೆಗೆ ಬರಲು ಸತೀಶ್ ಜಾರಕಿಹೊಳಿಯವರ ಪ್ರಚೋದನೆಯೂ ಕಾರಣವಾಗಿತ್ತು.ಹನಿಟ್ರ್ಯಾಪ್ ಪ್ರಸ್ತಾಪವಾಗಿ ವಾತಾವರಣದಲ್ಲಿ ಸಂಚಲನ ಸೃಷ್ಟಿಯಾಗುತ್ತಿದ್ದಂತೆ ಕರ್ನಾಟಕ ಭವನ ನಿರ್ಮಾಣ ಕಾಮಗಾರಿಯ ಉಸ್ತುವಾರಿ ನೆಪದಲ್ಲಿ ಸತೀಶ್ ಜಾರಕಿಹೊಳಿ ದೆಹಲಿಗೆ ತೆರಳಿದ್ದರು.ಅಲ್ಲಿ ಕಾಂಗ್ರೆಸ್? ವರೀಷ್ಠರನ್ನು ಭೇಟಿ ಮಾಡಿ ರಾಜ್ಯ ರಾಜಕಾರಣದ ಸಂಪೂರ್ಣ ಚಿತ್ರಣ ಮುಂದಿಟ್ಟಿದ್ದರು. ಜೊತೆಗೆ ಕುಮಾರಸ್ವಾಮಿಯವರ ಜೊತೆ ಡಿನ್ನರ್ ಮೀಟಿಂಗ್ ನಡೆಸಿರುವುದು ಡಿ.ಕೆ.ಶಿವಕುಮಾರ್‌ಗಷ್ಟೆ? ಅಲ್ಲ ಸಿದ್ದರಾಮಯ್ಯ ಬಣಕ್ಕೂ ಅಚ್ಚರಿ ಮೂಡಿಸಿದೆ.

## ಗೋಧಿ ದಾಸ್ತಾನಿನ ಮೇಲೆ ಕೇಂದ್ರ ಸರ್ಕಾರ ನಿಗಾ



ನವದೆಹಲಿ,ಮಾ.26- ಕೇಂದ್ರ ಸರ್ಕಾರ ಗೋಧಿ (ದಾಸ್ತಾನು ಮೇಲೆ ನಿಗಾ ವಹಿಸಿದ್ದು, ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ಎಲ್ಲಾ ವರ್ತಕರು ಏಪ್ರಿಲ್ 1ರಿಂದ ಕಡ್ಡಾಯವಾಗಿ ಗೋಧಿ ದಾಸ್ತಾನು ವಿವರ ದಾಖಲಿಸಬೇಕು ಎಂದು ಕೇಂದ್ರ ಆಹಾರ ಇಲಾಖೆ ಸೂಚನೆ ನೀಡಿದೆ. ದೇಶದಲ್ಲಿ ಆಹಾರ ಭದ್ರತೆ ಕಲ್ಪಿಸಲು ಮತ್ತು ಅಪಪ್ರಚಾರದ ಊಹಾಪೋಹಗಳನ್ನು ತಡೆಗಟ್ಟುವ ಸಲುವಾಗಿ ಈ ಪಾರದರ್ಶಕ ಕ್ರಮ ಕೈಗೊಳ್ಳಲಾಗಿದೆ. ಅದರಂತೆ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ವ್ಯಾಪಾರಿಗಳು/ಸಗಟು ವ್ಯಾಪಾರಿಗಳು, ಚಿಲ್ಲರೆ ವ್ಯಾಪಾರಿಗಳು, ದೊಡ್ಡ ವರ್ತಕರು ಮತ್ತು ಸಂಸ್ಕರಣಾಕಾರರು ಏಪ್ರಿಲ್ 1ರಿಂದ ಗೋಧಿ ದಾಸ್ತಾನು ಸಿಕೊಳ್ಳುವಂತೆ ನಿರ್ದೇಶನ ನೀಡಲಾಗಿದೆ.

ಕೇಂದ್ರ ಸರ್ಕಾರ ಎಲ್ಲಾ ವರ್ಗದ ಘಟಕಗಳಿಗೆ ಗೋಧಿ ದಾಸ್ತಾನು ಮಿತಿಯನ್ನು ಇದೇ ಮಾರ್ಚ್ 31ಕ್ಕೆ ಅಂತ್ಯಗೊಳಿಸಲಿದ್ದು, ನಂತರ ಹೊಸದಾಗಿ ಪೋರ್ಟಲ್‌ನಲ್ಲಿ ಗೋಧಿ ದಾಸ್ತಾನು ಎಷ್ಟಿದೆ ಎಂಬುದನ್ನು ಬಹಿರಂಗಪಡಿಸಬೇಕು. ಪೋರ್ಟಲ್‌ನಲ್ಲಿ ಇನ್ನೂ ನೋಂದಣಿ ಮಾಡಿಕೊಳ್ಳದ ಘಟಕಗಳು ತ್ವರಿತವಾಗಿ ನೋಂದಾಯಿಸಿಕೊಳ್ಳಬೇಕು ಮತ್ತು ಪ್ರತಿ ಶುಕ್ರವಾರ ಗೋಧಿ ದಾಸ್ತಾನು ಬಗ್ಗೆ ಮಾಹಿತಿ ದಾಖಲಿಸಬೇಕು ಎಂದು ಸೂಚಿಸಿದೆ. ಎಲ್ಲಾ ಘಟಕಗಳು ಪೋರ್ಟಲ್‌ನಲ್ಲಿ ನಿಯಮಿತವಾಗಿ ಮತ್ತು ಸರಿಯಾಗಿ ದಾಸ್ತಾನು ಬಹಿರಂಗಪಡಿಸಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು ಎಂದು ಕೇಂದ್ರ ಆಹಾರ ಮತ್ತು ನಾಗರೀಕ ಪೂರೈಕೆ ಸಚಿವಾಲಯ ತಿಳಿಸಿದೆ.

### ಲಿಂಗಾನುಪಾತದಲ್ಲಿ ವ್ಯತ್ಯಾಸವಿರುವುದು ರಾಷ್ಟ್ರದ ಅಭಿವೃದ್ಧಿಗೆ ಪೂರಕವಲ್ಲ

## ಭ್ರೂಣ ಹತ್ಯೆ ಅಮಾನವೀಯ, ಕಾನೂನು ಬಾಹಿರ ಚಟುವಟಿಕೆ

ಕಲಬುರಗಿ:ಮಾ.25:ಲಿಂಗಾನುಪಾತ ಸಮತೋಲನಕ್ಕೆ ಗಂಡು-ಹೆಣ್ಣು ಇಬ್ಬರು ಅಗತ್ಯ. ಇಲ್ಲಿ ಯಾರೂ ಮೇಲು-ಕೀಳಲ್ಲ. ಹೆಣ್ಣು ಮಗುವಿನ ಬಗ್ಗೆ ಕೀಳರಿಮೆ ಸಲ್ಲದು. ಭ್ರೂಣ ಹತ್ಯೆ ಮಾಡುವುದು ಅಮಾನವೀಯ, ಕಾನೂನು ಬಾಹಿರ ಮತ್ತು ಮಹಾಪಾಪದ ಚಟುವಟಿಕೆಯಾಗಿದೆ. ಭ್ರೂಣ ಹತ್ಯೆ ತಡೆಗೆ ಕಾಯ್ದೆ-ಕಾನೂನುಗಳಿವೆ. ಸಮಾಜದಲ್ಲಿನ ಕೀಳರಿಮೆ ಮನಸ್ಸುಗಳ ಬದಲಾವಣೆ, ಜಾಗೃತಿ ಅಗತ್ಯವಾಗಿದೆ ಎಂದು ಉಪನ್ಯಾಸಕ, ಸಮಾಜ ಸೇವಕ ಉಪನ್ಯಾಸಕ ಎಚ್.ಬಿ.ಪಾಟೀಲ್ ಅಭಿಪ್ರಾಯಪಟ್ಟರು.



ನಗರದ ಆಳಂದ ರಸ್ತೆಯ ಶೆಟ್ಟಿ ಕಾಂಪೆನಲ್ಲಿರುವ 'ಬಸವೇಶ್ವರ ಡಿಗ್ರಿ ಕಾಲೇಜ್'ನಲ್ಲಿ 'ಬಸವೇಶ್ವರ ಸಮಾಜ ಸೇವಾ ಬಳಗ'ದ ವತಿಯಿಂದ ಮಂಗಳವಾರ ಏರ್ಪಡಿಸಿದ್ದ 'ಅಂತಾರಾಷ್ಟ್ರೀಯ ಭ್ರೂಣ ಹತ್ಯಾ ವಿರೋಧಿ ದಿನಾಚರಣೆ'ಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಹೆಣ್ಣು ಮಕ್ಕಳ ಮೇಲಿನ ಅತ್ಯಾಚಾರ, ವರದಕ್ಷಿಣೆ ಕಿರುಕುಳ, ಕೌಟುಂಬಿಕ ಹಿಂಸೆ, ಸಾಂಸ್ಕೃತಿಕ-ಧಾರ್ಮಿಕ ಅಂಶಗಳಂತಹ ಮತ್ತಿತರ ಕಾರಣಗಳಿಂದ ಹೆಣ್ಣು ಮಗುವನ್ನು ಹೊಂದಲು ಬಯಸುತ್ತಿಲ್ಲ. ಕೇರಳದಂತಹ ಅಧಿಕ ಸಾಕ್ಷರತಾ ದರವಿರುವ ರಾಜ್ಯಗಳಲ್ಲಿ ಉತ್ತಮ ಲಿಂಗಾನುಪಾತವಿರುವುದು ಗಮನಿಸಿದರೆ, ವ್ಯಾಪಕ ಶಿಕ್ಷಣದ ಅಗತ್ಯತೆ ತಿಳಿದುಬರುತ್ತದೆ. ಹೆಣ್ಣು ಭ್ರೂಣ ಹತ್ಯೆ ಪ್ರಕರಣಗಳು ಕೊನೆಗಾಣಿಸಲು ಕರ್ನಾಟಕ ಸರ್ಕಾರವು ಹಲವಾರು ಕ್ರಮಗಳನ್ನು ಘೋಷಿಸಿದೆ. ಸಂಬಂಧಿತ ಕಾನೂನಿಗೆ ತಿದ್ದುಪಡಿ ಮಾಡುವುದು, ಹೊಸ ನೀತಿಯನ್ನು ರೂಪಿಸುವುದು ಮತ್ತು ರಾಜ್ಯ ಮಟ್ಟದ ಕಾರ್ಯಪಡೆಯನ್ನು ಸ್ಥಾಪಿಸುವುದು ಪ್ರಮುಖವಾಗಿವೆ ಎಂದರು.

ಕಾಲೇಜಿನ ಪ್ರಾಚಾರ್ಯ ನಾಗೇಶ ತಿಮಾಜಿ ಮಾತನಾಡಿ, ಲಿಂಗಾನುಪಾತದಲ್ಲಿ ವ್ಯತ್ಯಾಸವಿರುವುದು ರಾಷ್ಟ್ರದ ಅಭಿವೃದ್ಧಿಗೆ ಪೂರಕವಲ್ಲ. ಹೆಣ್ಣು ಮಗುವಿನ ವಿರುದ್ಧ ತಾರತಮ್ಯ, ಲಿಂಗ ಪಕ್ಷಪಾತ ಮತ್ತು ಆಳವಾಗಿ ಬೇರೂರಿರುವ ಪುರುಷ ಪ್ರಧಾನ ಸಮಾಜದ ಪೂರ್ವಾಗ್ರಹತೆ ಸಂಪೂರ್ಣವಾಗಿ ತೊಲಗಬೇಕಾಗಿದೆ. ಭ್ರೂಣ ಹತ್ಯೆ ಎಂದಿಗೂ ಕೂಡಾ ಆಗದಿರಲಿ ಎಂದು ಆಶಯ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಸಮಾಕ ಶಿವಯೋಗೆಪ್ಪಾ ಎಸ್.ಬಿರಾದಾರ, ಕಾಲೇಜಿನ ಉಪನ್ಯಾಸಕರಾದ ರಾಜೇಶ್ವರಿ ಪಾಟೀಲ್, ಅನ್ನಪೂರ್ಣ ಪಸಾರ್, ಪ್ರಮುಖರಾದ ಶ್ರೀಶೈಲ್ ಅಷ್ಟಗಿ, ಸಾತಲಿಂಗ ಪಾಟೀಲ್, ಶಿವಶಂಕರ, ವಿನಾಯಕ್, ಕಾರ್ತಿಕ್, ಗಾಯತ್ರಿ, ಕಲ್ಪನಾ, ಅರ್ಪಿತಾ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಬಿಜೆಪಿಯಿಂದ 6 ವರ್ಷಗಳ ಕಾಲ ಯತ್ನಾಳ್ ಉಚ್ಚಾಟನೆ..!



**ನವದೆಹಲಿ:**

ಬಿಜೆಪಿಯಿಂದ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರನ್ನು ಉಚ್ಛಾಟನೆ ಮಾಡಲಾಗಿದೆ. ಶಿಸ್ತು ಸಮಿತಿ ನೀಡಿದ್ದ ಶೋಕಾಸ್ ನೋಟಿಸ್‌ಗೆ ಸರಿಯಾಗಿ ಉತ್ತರ ನೀಡದ ಕಾರಣ ಬಿಜೆಪಿ ಹೈಕಮಾಂಡ್ ಈ ನಿರ್ಧಾರವನ್ನು ಕೈಗೊಂ ಡಿದೆ. ತಕ್ಷಣದಿಂದ ಜಾರಿಗೆ ಬರುವಂತೆ 6 ವರ್ಷಗಳ ಕಾಲ ಉಚ್ಛಾಟನೆ ಮಾಡಲಾಗಿದೆ. ನಿನ್ನೆಯಷ್ಟೇ ಬಿಜೆಪಿ ಹೈಕಮಾಂಡ್ ಬಿಜೆಪಿ ಎರಡು ಬಣಗಳಿಗೆ ನೋಟಿಸ್ ನೀಡಿತ್ತು. ಇದೀಗ ಬಸನಗೌಡ ಪಾಟೀಲ್ ಯತ್ನಾಳ್ ಅವರನ್ನು ಬಿಜೆಪಿ 6 ವರ್ಷಗಳ ಕಾಲ ಉಚ್ಛಾಟನೆ ಮಾಡುವ ಮೂಲಕ ಶಿಸ್ತು ಕ್ರಮ ಕೈಗೊಂಡಿದೆ. ಆ ಮೂಲಕ ಅಶಿಸ್ತನ್ನು ಸಹಿಸುವುದಿಲ್ಲ ಎಂಬ ಸಂದೇಶವನ್ನು ರವಾನಿಸಿದೆ.ರಾಜ್ಯ ಬಿಜೆಪಿ ಯಲ್ಲಿನ ಬಣ ಬಡಿದಾಟ ಈಗಾಗಲೇ ಹೈಕಮಾಂಡ್ ಅಂಗಳ ತಲುಪಿತ್ತು. ಅಲ್ಲದೇ ಈ ಬಗ್ಗೆ ರಾಷ್ಟ್ರೀಯ ನಾಯಕರ ಗಮನಕ್ಕೂ ಬಂದಿದ್ದು, ಹಲವು ಬಾರಿ ಚರ್ಚೆಗಳನ್ನೂ ನಡೆಸಿದ್ದರು. ಬಿಜೆಪಿ ಶಾಸಕ ಯತ್ನಾಳ್ ಸದಾ ಪಕ್ಷದ ಹಾಗೂ ನಾಯಕರ ಬಗ್ಗೆ ಆರೋಪಗಳನ್ನು ಮಾಡುತ್ತಲೇ ಇದ್ದರು. ಅದರಲ್ಲೂ ಬಿಜೆಪಿರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ ವಿರುದ್ಧ ಆಕ್ರೋ ಶ ಹೊರಹಾಕುತ್ತಲೇ ಇದ್ದರು. ಇದೀಗ ಬಸನಗೌಡ ಪಾಟೀಲ್ ಅವರನ್ನು ಬಿಜೆಪಿ ಕೇಂದ್ರ ಶಿಸ್ತು ಸಮಿತಿ 6 ವರ್ಷಗಳ ಕಾಲ ಉಚ್ಛಾಟನೆ ಮಾಡಿ ಆದೇಶ ಹೊರಡಿಸಿದೆ. ವಿಶೇಷ ಎಂದರೆ, ಉಚ್ಚಾಟನೆ ಆದೇಶ ಹೊರಬೀಳುವ ಮೊದಲು ಯತ್ನಾಳ್ ಅವರು ದೆಹಲಿಯಲ್ಲೇ ಇದ್ದರು. ಎಂದಿನಂತೆ ಪಕ್ಷದ ರಾಜ್ಯಧ್ಯಕ್ಷ ಬಿ.ವೈ.ವಿಜಯೇಂದ್ರ ಮತ್ತು ಯಡಿಯೂರಪ್ಪ ವಿರುದ್ಧ ಬಹಿರಂಗ ಹೇಳಿಕೆ ನೀಡಿದ್ದ ಬೆನ್ನಲ್ಲೇ, ಉಚ್ಚಾಟನೆ ಆದೇಶ ಹೊರ ಬಿದ್ದಿದೆ.

ಪಕ್ಷದ ಕೇಂದ್ರ ಶಿಸ್ತು ಸಮಿತಿಯು 2025 ಫೆಬ್ರವರಿ 10 ರಂದು ನೀಡಿದ್ದ ಶೋಕಾಸ್ ನೋಟಿಸ್‌ಗೆ ನಿಮ್ಮ ಪ್ರತಿಕ್ರಿಯೆಯನ್ನು ಪರಿಗಣಿಸಿದೆ ಮತ್ತು ಹಿಂದಿನ ಶೋಕಾಸ್ ನೋಟಿಸ್‌ಗಳಿಗೆ ಪ್ರತಿಕ್ರಿಯೆ ಯಾಗಿ ಉತ್ತಮ ನಡವಳಿಕೆ ಮತ್ತು ನಡವಳಿಕೆಯ ಭರವಸೆಗಳನ್ನು ನೀಡಿದ್ದರೂ ಸಹ, ನೀವು ಪಕ್ಷದ ಶಿಸ್ತಿನ ಪದೇ ಪದೇ ಉಲ್ಲಂ ಘಿಸುತ್ತಿರುವ ್ರದನ್ನು ಗಂಭೀರ ವಾಗಿ ಪರಿಗಣಿಸಿದೆ. ಆದ್ದರಿಂ ದ, ನಿಮ್ಮನ್ನು ಪಕ್ಷದ ಪ್ರಾಥಮಿ ಿಕ ಸದಸ್ಯತ್ವದಿಂದ ತಕ್ಷಣದಿಂದ ಜಾರಿಗೆ ಬರುವಂತೆ 6 ವರ್ಷ ಗಳ ಅವಧಿಗೆ ಉಚ್ಚಾಟಿಸಲು ನಿರ್ಧರಿಸಲಾಗಿದೆ ಮತ್ತು ನೀವು ಇಲ್ಲಿಯವರೆಗೆ ಹೊಂದಿದ್ದ ಯಾವುದೇ ಪಕ್ಷದ ಹುದ್ದೆಯಿಂದ ನಿಮ್ಮನ್ನು ತೆಗೆದುಹಾಕಲಾಗಿದೆ ಎಂದು ಬಿಜೆಪಿ ಕೇಂದ್ರ ಶಿಸ್ತು ಸಮಿತಿಯ ಕಾರ್ಯದರ್ಶಿ ಓಂ ಪಾಠಕ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಿಜೆಪಿ ಶಿಸ್ತು ಸಮಿತಿ ಎರಡು ಬಾರಿ ನೋಟಿಸ್ ನೀಡಿತ್ತು. ನೋಟಿಸ್ ನೀಡಿದ್ದರೂ ಪದೇ ಪದೇ ಪಕ್ಷದ ವಿರೋಧಿ ಚಟುವಟಿಕೆ, ಪಕ್ಷದ ಶಿಸ್ತು ಉಲ್ಲಂಘನೆ ಮಾಡುತ್ತಿದ್ದರು. ಕೊನೆಗೆ ಫೆ.10 ರಂದು ಶೋಕಾಸ್ ನೋಟಿಸ್‌ಗೆ ಯತ್ನಾಳ್ ಉತ್ತರ ನೀಡಿದ್ದರು. ಯತ್ನಾಳ್ ಉತ್ತರ, ಸ್ಪಷ್ಟನೆ ಒಪ್ಪದ ಕೇಂದ್ರ ಶಿಸ್ತು ಸಮಿತಿ ಇಂದು ಈ ನಿರ್ಧಾರ ಕೈಗೊಂಡಿದೆ.

## ಕನ್ನಡ ಫಿಲಂ ಚೇಂಬರ್‌ನಿಂದ ಯುವ ರತ್ನ ಪ್ರಶಸ್ತಿ ಪ್ರದಾನ

**ಹುಮನಾಬಾದ್:ಮಾ.25:** ತಾಲ್ಲೂಕಿನ ಕಠಳ್ಳಿ ಗ್ರಾಮದ ಧಾರವಾಹಿ ಮತ್ತು ಸಿನಿಮಾ ಕಲಾವಿದ ತಮಣಪ್ಪ ಜಮಾದರ್ಗೆ ಕನ್ನಡ ಫಿಲಂ ಚೇಂಬನಿಂದ ಬೆಂಗಳೂರನ್ ರವೀಂದ್ರ ಕಲಾ ಕ್ಷೇತ್ರದಲ್ಲಿ ಈಚೆಗೆ ನಡೆದ ಸಮಾರಂಭದಲ್ಲಿ ಯುವ ರತ್ನ ಪ್ರಶಸ್ತಿ ಪ್ರದಾನ ಮಾಡಿ ಗೌರ ವಿಸಲಾಯಿತು. ಕನ್ನಡ ಫಿಲಂ ಚೇಂಬರ್ ಸಂಸ್ಥೆಯು ವತಿಯಿಂದ ಸಮಾಜದಲ್ಲಿ ತಮ್ಮ ದೇ ಆದ ವಿವಿಧ ಕ್ಷೇತ್ರಗ ಳಲ್ಲಿ ಸಾಧನೆ ಮಾಡಿರುವ ಹಾಗೂ ಸಾಧನೆಯ ದಾರಿಯಲ್ಲಿ ಸಾಗುತ್ತಿರುವ ಸಾಧಕರಿಗೆ ಸರಳತೆಯ ಶಿಖರ, ಕರ್ನಾಟಕ ರತ್ನ, ನಗು ಮುಖದ ಪರಮಾತ್ಮ ಅಭಿಮಾ ನಿಗಳ ಪ್ರೀತಿಯ ಅಪ್ಪು, ಪವರ್ ಸ್ಟಾರ್ ಡಾ. ಪುನೀತ್ ರಾಜಕುಮಾರವರ ಸ್ಫೂರ್ತಿಯೊಂದಿಗೆ ರಾಜ್ಯ ಮಟ್ಟದ ಕಾರ್ಯಕ್ರಮದ ವೇದಿಕೆಯಲ್ಲಿ ಸನ್ಮಾನಿಸಿ ಅಭಿನಂದನಾ ಪ್ರಶಸ್ತಿ ಪತ್ರ ವಿತರಿಸಿದರು.



ಕನ್ನಡ ಫಿಲಂ ಚೇಂಬರ್‌ನ ಅಧ್ಯಕ್ಷ ಎಂ.ಎಸ್. ರವೀಂದ್ರ, ಉಪಾಧ್ಯಕ್ಷರಾದ ಡಾ.ಎಎನ್. ಪ್ರಹ್ಲಾದ್, ನರಸಿಂಹಯ್ಯ, ಪ್ರಧಾನ ಕಾರ್ಯದರ್ಶಿ ಡಾ.ರಾಘವ ದಾನಿ ಅವರು ಸನ್ಮಾನಿಸಿ ಅಭಿನಂದನಾ ಪ್ರಶಸ್ತಿ ಪತ್ರ ವಿತರಿಸಿದರು.

## ದಾರ್ಮಿಕ ಶ್ರದ್ಧಾ ಕೇಂದ್ರಗಳ ಮತ್ತು ಸಂಸ್ಕೃತಿಯ ಉಳಿವು ನಮ್ಮೆಲ್ಲರ ಹೊಣೆ



**ಸಿರುಗುಪ್ಪ, ಮಾ.24:** ತಾಲೂಕಿನ ಮಾಟಸಗೂರು ಗ್ರಾಮದ ಶ್ರೀ ಈಶ್ವರ ದೇವಸ್ಥಾನ ಜೀರ್ಣೋದ್ಧಾರ ಗೊಳ್ಳುತ್ತಿದ್ದು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜಿಲ್ಲಾ ನಿರ್ದೇಶಕ ರೋಹಿತಾಕ್ಷ ಅವರು ಶ್ರೀ ಈಶ್ವರ ದೇವಸ್ಥಾನ ಜೀರ್ಣೋದ್ಧಾರಕ್ಕೆ ಶ್ರೀ ಕ್ಷೇತ್ರ ಧರ್ಮಸ್ಥಳದಿಂದ ಮಂಜೂರು ಗೊಳಿಸಿದ 2 ಲಕ್ಷ ಮೊತ್ತದ ಡಿ ಡಿ ಯನ್ನು ದೇವಸ್ಥಾನ ಸಮಿತಿಗೆ ವಿತರಣೆ ಮಾಡಿದರು.

ನಂತರ ಮಾತನಾಡಿದ ಅವರು, ಶ್ರೀ ಈಶ್ವರ ದೇವಸ್ಥಾನವು ಒಳ್ಳೆಯ ವಾಸ್ತುಶಿಲ್ಪ ದೊ ಂದಿಗೆರಚನೆಯಾಗುತ್ತಿದ್ದು ಶ್ರೀ ಕ್ಷೇತ್ರ ಧರ್ಮಸ್ಥಳದಿಂದ 2 ಲಕ್ಷ ಮೊತ್ತ ಮಂಜೂರು ಗೊಂಡಿದ್ದು ಈ ದಿನ ಸಮಿತಿಗೆ ಹಸ್ತಾಂತರ ಮಾಡಿದ್ದು ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಆಧ್ಯಾತ್ಮಿಕ ಚಿಂತನೆ ಒಳಗೊಂಡ ಭಜನಾ ಕಮ್ಮಟ, ಸರ್ವಧರ್ಮ ಸಮ್ಮೇಳನ ನಡೆದು ಕೊಂಡು ಬರುತ್ತಿದ್ದು , ಇದೆ ಮೇ ತಿಂಗಳಲ್ಲಿ ಸಾಮೂಹಿಕ ವಿವಾಹ ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ನೆರ ವೇರ ಲಿದ್ದು. ವಾತ್ಸಲ್ಯ ಕಾಯ ರ್ಕ್ರಮದಡಿ ನಿರ್ಗತಿಕರ ಮಾಶಾಸನ , ಜಲಮಂಗಲ ಕಾರ್ಯಕ್ರಮದ ವಿಶೇಷ ಚೇತನರಿಗೆ ಸಲಕರಣೆ ವಿತರಣೆ ಮಾಡಲಾಗುತ್ತಿದೆ. ನೆಲ ಜಲ ಸಂರಕ್ಷಣೆಗಾಗಿ ವಿಶೇಷ ಕಾಳಜಿ ವಹಿಸಿ "ನಮ್ಮೂರು ನಮ್ಮ ಕೆರೆ" ಕಾರ್ಯಕ್ರಮದಡಿ ಯಲ್ಲಿ ಕೆರೆ ಹೂಳೆತ್ತುವ ಮೂಲಕ ಜೀವಜಲ ಉಳಿಸುವ ಕಾರ್ಯಕ್ರಮವನ್ನು ನಡೆಸಿಕೊಂಡು ಬರ ಲಾಗುತ್ತಿದ್ದು ಈ ವರೆಗೆ 889 ಕೆರೆ ಪುನಶ್ಚೇತನ ಪೂರ್ಣಗೊಳಿಸಿದ್ದು "1000 "ಕೆರೆಗಳನ್ನು ಪುನಶ್ಚೇತನ ಗೊಳಿಸುವ ಕಾರ್ಯಕ್ಕೆ ಗುರಿ ಹೊಂದಲಾಗಿದೆ . ಗ್ರಾಮಗಳಲ್ಲಿ ಜನರು ಸುಖ ಶಾಂತಿ ನೆಮ್ಮದಿಯಿಂದ ಜೀವನ ನಡೆಸಲು ದೇವಸ್ಥಾನಗಳು ಮುಖ್ಯ ಪಾತ್ರ ವಹಿಸುತ್ತವೆ. ಧಾರ್ಮಿಕ ಶ್ರದ್ಧಾ ಕೇಂದ್ರಗಳು ಹಾಗೂ ಸಂಸ್ಕೃತಿ ಉಳಿಸುವ ಜವಾಬ್ದಾರಿ ನಮ್ಮೆಲ್ಲರದಾಗಿದೆ ಜೀರ್ಣೋದ್ಧಾರಗೊಳ್ಳುತ್ತಿರುವ ಶ್ರೀ ಈಶ್ವರ ಸ್ವಾಮಿಯ ದೇವಸ್ಥಾನ ಇನ್ನಷ್ಟು ಉತ್ತಮ ರೀತಿಯಲ್ಲಿ ದೇವಸ್ಥಾನದ ಅಭಿವೃದ್ಧಿ ಕಾರ್ಯಗಳು ಮುಂದುವರೆಯಲಿ ಗ್ರಾಮದಲ್ಲಿ ಮಳೆ, ಬೆಳೆ ಜನರ ಜೀವನ ಸಮೃದ್ಧಮಯವಾಗಿರಲಿ ಎಂದು ಶುಭ ಹಾರೈಸಿದರು.

ಕಾರ್ಯಕ್ರಮದಲ್ಲಿ ಯೋಜನೆಯ ತಾಲೂಕು ಯೋಜನಾಧಿಕಾರಿ ಸುಧೀರ್ ಹಂಗಳೂರ್, ದೇವಸ್ಥಾನ ಅಭಿವೃದ್ಧಿಯ ಸಮಿತಿಯ ಗೌರವ ಅಧ್ಯಕ್ಷ ಶಾಂತ ಕುಮಾರ್, ಅಧ್ಯಕ್ಷ ಪಂಪಯ್ಯ ಸ್ವಾಮಿ, ಕಾರ್ಯದರ್ಶಿ ಈಶ್ವರಯ್ಯ ಸ್ವಾಮಿ ಹಾಗೂ ಮುಖಂಡರಾದ ಪಂಪನಗೌಡರು, ಹೊಸಮನಿ ವೀರಭದ್ರಪ್ಪ, ವಲಯ ಮೇಲ್ವಿಚಾರಕ ಪ್ರಬಯ್ಯಾ, ಸೇವಾ ಪ್ರತಿನಿಧಿ ರಾಜೇಶ್ವರಿ, ಸಿ.ಎಸ್.ಸಿ ಸೇವಾದಾರ ಚಂದ್ರು ಹಾಗೂ ಸಾರ್ವಜನಿಕರು ಇದ್ದರು.

# ಈ ಸಲನೂ ಕಪ್ ನಮ್ಮದಲ್ಲವಂತೆ..! ಗಿಲ್‌ಕ್ರಿಸ್ಟ್ ಭವಿಷ್ಯ



**ನವದೆಹಲಿ,ಮಾ.22–** ಈ ಬಾರಿಯೂ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಐಪಿಎಲ್ ಟ್ರೋಫಿ ಎತ್ತಿ ಹಿಡಿಯುವುದಿಲ್ಲ ಎಂದು ಆಸ್ಟ್ರೇಲಿಯಾ ಕ್ರಿಕೆಟ್ ತಂಡದ ಮಾಜಿ ನಾಯಕ ಅಡಂ ಗಿಲ್‌ಕ್ರಿಸ್ಟ್ ಭವಿಷ್ಯ ನುಡಿದಿದ್ದಾರೆ.

ಇಂಗ್ಲೆಂಡ್ ತಂಡದ ಮಾಜಿ ನಾಯಕ ಮೈಕಲ್ ವಾನ್ ನಡೆಸುವ ಕ್ಲಬ್ ಪ್ರೈರಿ ಫೈರ್ ಪಾಡ್‌ಕ್ಯಾಸ್ಟ್‌ನಲ್ಲಿ ಐಪಿಎಲ್ ಕುರಿತು ಮಾತನಾಡಿದ ಅವರು. ಈ ಬಾರಿ ಆರ್‌ಸಿಬಿ ತಂಡವು ಕೊನೆಯ ಸ್ಥಾನ ಪಡೆಯುವ ಸಾಧ್ಯತೆ ಹೆಚ್ಚಿದೆ. ಏಕೆಂದರೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದಲ್ಲಿ ಇಂಗ್ಲೆಂಡ್ ಆಟಗಾರರು ಹೆಚ್ಚಿದ್ದಾರೆ ಎಂದಿದ್ದಾರೆ.

ಹೀಗಾಗಿ ಅವರು ಗೆಲ್ಲುವ ಸಾಧ್ಯತೆಯಿಲ್ಲ ಎಂದು ಗಿಲ್‌ಕ್ರಿಸ್ಟ್ ಅವರು, ಮೈಕಲ್ ವಾನ್ ಅವರ ಕಾಲೆಳೆದಿದ್ದಾರೆ. ಈ ಮೂಲಕ ಈ ಬಾರಿ ಕೂಡ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಕಪ್ ಗೆಲ್ಲುವುದನ್ನು ನಿರೀಕ್ಷಿಸಬೇಡಿ.

ನಾನು ವಿರಾಟ್ ಕೊಹ್ಲಿಯ ವಿರೋಧಿ ಏನಲ್ಲ. ಆರ್‌ಸಿಬಿ ಅಭಿಮಾನಿಗಳ ವಿರುದ್ಧವೂ ಇಲ್ಲ. ಇಂತಹ ಕಠೋರ ಹೇಳಿಕೆಗೆ ಮೊದಲೇ ನಾನು ಆರ್‌ಸಿಬಿ ಫ್ಯಾನ್ಸ್ ಬಳಿ ಕ್ಷಮೆಯಾಚಿಸುತ್ತೇನೆ ಎಂದಿದ್ದಾರೆ. ಇಂತಹ ಆಟಗಾರರನ್ನು ಆಯ್ಕೆ ಮಾಡಿದ ನಿಮ್ಮ ಆಯ್ಕೆಗಾರರ ಬಳಿ ಮಾತನಾಡಿದರೆ ಉತ್ತಮ ಎಂದು ಅಡಂ ಗಿಲ್‌ಕ್ರಿಸ್ಟ್ ಹೇಳಿದ್ದಾರೆ. ಈ ಬಾರಿ ಆರ್‌ಸಿಬಿ ತಂಡದಲ್ಲಿ ಮೂವರು ಇಂಗ್ಲೆಂಡ್ ಆಟಗಾರರಿದ್ದಾರೆ. ಅವರೆಂದರೆ ಫಿಲ್ ಸಾಲ್ಟ್, ಲಿಯಾಮ್ ಲಿವಿಂಗ್‌ಸ್ಟೋನ್ ಹಾಗೂ ಜೇಕಬ್ ಬೆಥೆಲ್. ಈ ಮೂವರು ಆಟಗಾರರು ಪ್ಲೇಯಿಂಗ್ ಇಲೆವೆನ್ ನಲ್ಲಿ ಕಾಣಿಸಿಕೊಳ್ಳುವ ಸಾಧ್ಯತೆಯಿದೆ. ಅತ್ತ ಮೂವರು ಇಂಗ್ಲೆಂಡ್ ಪ್ಲೇಯರ್ ಗಳು ಭಾರತದ ವಿರುದ್ಧದ ಟಿ20 ಸರಣಿಯಲ್ಲಿ ಅತ್ಯಂತ ಕಳಪೆ ಪ್ರದರ್ಶನ ನೀಡಿದ್ದರು. ಹೀಗಾಗಿಯೇ ಆರ್‌ಸಿಬಿ ತಂಡವು ಇಂಗ್ಲೆಂಡ್ ಆಟಗಾರರ ನೆರವಿನಿಂದ ಕಪ್ ಗೆಲ್ಲಲು ಸಾಧ್ಯವಿಲ್ಲ. ಈ ಬಾರಿ ಅಂಕ ಪಟ್ಟಿಯಲ್ಲಿ ಕೊನೆಯ ಸ್ಥಾನ ಅಲಂಕರಿಸಲಿದೆ ಎಂದು ಅಡಂ ಗಿಲ್‌ಕ್ರಿಸ್ಟ್ ಹೇಳಿದ್ದಾರೆ. ತಂಡದಲ್ಲಿರುವ ವಿದೇಶಿ ಆಟಗಾರರು:ಫಿಲ್ ಸಾಲ್ಟ್ (ಇಂಗ್ಲೆಂಡ್) ಲಿಯಾಮ್ ಲಿವಿಂಗ್ ಸ್ಟೋನ್ (ಇಂಗ್ಲೆಂಡ್) ಜೇಕಬ್ ಬೆಥೆಲ್ (ಇಂಗ್ಲೆಂಡ್ 1)ಟಿಮ್ ಡೇವಿಡ್ (ಆಸ್ಟ್ರೇಲಿಯಾ)ಜೋಶ್ ಹ್ಯಾಝಲ್‌ಡ್ (ಆಸ್ಟ್ರೇಲಿಯಾ)ಲುಂಗಿ ಎನ್‌ಗಿಡಿ (ಸೌತ್ ಆಫ್ರಿಕಾ) ರೊಮಾರಿಯೊ ಶೆಫರ್ಡ್ (ವೆಸ್ಟ್ ಇಂಡೀಸ್) ನುವಾನ್ ತುಷಾರ (ಶ್ರೀಲಂಕಾ) ಉಳಿದಂತೆ ವಿರಾಟ್ ಕೊಹ್ಲಿ, ರಜತ್ ಪಾಟಿದಾರ್, ಯಶ್ ದಯಾಳ್, ಜಿತೇಶ್ ಶರ್ಮಾ, ರಾಸಿಖ್ ಸಲಾಂ, ಸುಯೇಶ್ ಶರ್ಮಾ, ಕೃನಾಲ್ ಪಾಂಡ್ಯ, ಭುವನೇಶ್ವರ್ ಕುಮಾರ್, ಸ್ವಪ್ನಿಲ್ ಸಿಂಗ್, ಟಿಮ್ ಡೇವಿಡ್, ಮನೋಜ್ ಭಾಂಡಗೆ, ಸ್ವಸ್ತಿಕ್ ಚಿಕಾರ, ದೇವದತ್ ಪಡಿಕ್ಕಲ್, ಮೋಹಿತ್ ರಾಠಿ, ಅಭಿನಂದನ್ ಸಿಂಗ್ ಇದ್ದಾರೆ."

# ಹಸಿರು ಬಟಾಣಿ ಕೂಡ ಆರೋಗ್ಯಕ್ಕೆ ಹಾನಿಕರ..! ವರದಿಯಲ್ಲಿ ಬಹಿರಂಗ

**ಬೆಂಗಳೂರು,ಫೆ.28–** ಇಡ್ಲಿ ಬಳಿಕ ಹಸಿರು ಬಟಾಣಿ ಕೂಡ ಅಸುರಕ್ಷಿತ ಎಂಬುದು ಆಹಾರ ಇಲಾಖೆಯ ಪ್ರಯೋಗದಿಂದ ದೃಢಪಟ್ಟಿದೆ. ಬೆಂಗಳೂರಿನ ವಿವಿಧ ಭಾಗದಲ್ಲಿನ ಸುಮಾರು 36 ಮಾದರಿಯ ಹಸಿರು ಬಟಾಣಿ ಮಾದರಿಗಳನ್ನು ಪಡೆದಿದ್ದ ಆಹಾರ ಇಲಾಖೆ ಅವುಗಳನ್ನು ಪ್ರಯೋಗಾಲಯದಲ್ಲಿ ಪರೀಕ್ಷೆಗೊಳಪಡಿಸಿತ್ತು. ಇದೀಗ ವರದಿ ಬಂದಿದ್ದು, 28ಕ್ಕೂ ಹೆಚ್ಚು ಹಸಿರು ಬಟಾಣಿ ಮಾದರಿಗಳು ಅಸುರಕ್ಷಿತ ಎಂಬ ವಿಚಾರ ತಿಳಿದುಬಂದಿದೆ. ಬಟಾಣಿ ಹಸಿರಾಗಿ ಕಾಣಲು ಕೃತಕ ಬಣ್ಣ ಬಳಸಲಾಗುತ್ತಿದೆ. ಕಲರ್ ಬಳಕೆಯಿಂದ ಬಟಾಣಿ ಸಾಮಾನ್ಯಕ್ಕಿಂತ ಹೆಚ್ಚು ಹಸಿರಾಗಿ ಕಾಣುತ್ತಿದ್ದು, ಜನರನ್ನು ಆಕರ್ಷಿಸುತ್ತಿದೆ. ಬಟಾಣಿಯಲ್ಲಿ ಬಣ್ಣ ಬಳಕೆ ಮಾಡುತ್ತಿರುವುದರಿಂದ ಜನರ ಆರೋಗ್ಯದ ಮೇಲೆ ಬೀರುತ್ತಿದೆ. ವರದಿಯಲ್ಲಿ ಬಟಾಣಿಯ ಬಣ್ಣ ಕಿಡ್ನಿಯ ಮೇಲೆ ಪರಿಣಾಮ ಬೀರಲಿದೆ ಎಂದು ಬಹಿರಂಗಗೊಂಡಿದೆ. ಈ ಹಿನ್ನೆಲೆಯಲ್ಲಿ ಆರೋಗ್ಯ ಹಾಗೂ ಆಹಾರ ಸುರಕ್ಷತಾ ಇಲಾಖೆ ಕೃತಕ ಬಣ್ಣ ಬಳಸಿ ಬಟಾಣಿ ಮಾರಟ ಮಾಡುವ ವ್ಯಾಪಾರಿಗಳ ಮೇಲೆ ಕಾನೂನು ಕ್ರಮ ಕೈಗೊಳ್ಳಲು ಮುಂದಾಗಿದೆ. ಈ ಹಿಂದೆ ರೆಡ್ ವೆಲ್ವೆಟ್ ಮತ್ತು ಬ್ಲ್ಯಾಕ್ ಫಾರೆಸ್ಟ್‌ನಂತಹ ಜನಪ್ರಿಯ ಕೇಕ್ ಸೇರಿದಂತೆ 12 ಕೇಕ್ ಮಾದರಿಗಳಲ್ಲಿ ಕ್ಯಾನ್ಸರ್–ಉಂಟುಮಾಡುವ ಅಂಶಗಳು ಪತ್ತೆಯಾಗಿದ್ದವು. ಗೋಬಿ ಮಂಚೂರಿಯನ್, ಕಬಾಬ್ ಗಳು ಮತ್ತು ಪಾನಿಪುರಿ ಸಾಸ್ ಗಳಂತಹ ಖಾದ್ಯಗಳಲ್ಲಿ ಕೃತಕ ಬಣ್ಣಗಳನ್ನು ಆಹಾರ ಸುರಕ್ಷತಾ ಇಲಾಖೆ ನಿಷೇಧಿಸಿದ ನಂತರ ಈ ಕ್ರಮಗಳು ಬಂದಿವೆ.



# ಚಿನ್ನಕ್ಕಿಂತ ಹೆಚ್ಚಾಗುತ್ತಿದೆ ಪ್ಲಾಟಿನಂ ಆಭರಣಗಳ ಬೇಡಿಕೆ



ಆಭರಣ ಆಯ್ಕೆ ಮಾಡುವಾಗ ಅದು ಪ್ರತಿನಿಧಿಸುವ ಸ್ಮರಣೆಗಳಂತೆಯೇ ಎಂದಿಗೂ ಉಳಿಯುವಂಥವನ್ನು ಆಯ್ಕೆ ಮಾಡಬೇಕಾಗುತ್ತದೆ, ಪ್ಲಾಟಿನಂ ಹಲವರಿಗೆ ಆದ್ಯತೆಯ ಆಯ್ಕೆಯಾಗಿದೆ. ವಿವಾಹಗಳು ಮತ್ತು ಹಬ್ಬದ ಸಂದರ್ಭಗಳಿಂದ ಪ್ರತಿನಿತ್ಯದ ಧರಿಸುವುದರೊಂದಿಗೆ ಪ್ಲಾಟಿನಂ ಲವ್ ಬ್ಯಾಂಡ್ಸ್ ಸರಿಸಾಟಿ ಇರದ ವೈವಿಧ್ಯತೆ ಮತ್ತು ಸಮಯರಹಿತ ಸೊಗಸು ನೀಡುತ್ತದೆ. ಪ್ಲಾಟಿನಂಗೆ ಹೆಚ್ಚುತ್ತಿರುವ ಬೇಡಿಕೆಯು ಅದರ ಶಕ್ತಿ, ವಿರಳತೆ ಮತ್ತು ವಿಶ್ವಾಸಾರ್ಹತೆಯ ಸಂಕೇತವಾಗಿ ಅದು ಸೆಳೆಯುವುದಕ್ಕೆ ಸಾಕ್ಷಿಯಾಗಿದೆ.

**ಆದ್ಯತೆಗಳಲ್ಲಿ ಬದಲಾವಣೆ: ಏಕೆ ಪ್ಲಾಟಿನಂ?**


ಪ್ಲಾಟಿನಂ ಲವ್ ಬ್ಯಾಂಡ್ಸ್ ಬೇಡಿಕೆಯು ಇತ್ತೀಚಿನ ವರ್ಷಗಳಲ್ಲಿ ಹೆಚ್ಚಾಗಿದ್ದು ಅದಕ್ಕೆ ಹೊಸ ತಲೆಮಾರಿನ ಕೊಳ್ಳುಗರು ವೈಯಕ್ತಿಕತೆಗೆ ಮತ್ತು ಕಾರ್ಯಕ್ಷಮತೆಗೆ ಮೌಲ್ಯ ನೀಡುವುದು ಕಾರಣವಾಗಿದೆ. ಉದ್ಯಮದ ಒಳನೋಟಗಳ ಪ್ರಕಾರ ಪ್ಲಾಟಿನಂ ಬರೀ ವಿವಾಹಗಳಲ್ಲಿ ಮಾತ್ರವಲ್ಲ, ಬದಲಿಗೆ ಬಾಂಧವ್ಯದ ಮೈಲಿಗಲ್ಲುಗಳನ್ನು ಸಂಭ್ರಮಿಸುವಾಗಲೂ ಅತ್ಯಂತ ಆದ್ಯತೆ ನೀಡಲಾಗುತ್ತದೆ. ಇದಕ್ಕೆ ಕಾರಣ ಎರಡು ರೀತಿಯದು, ಪ್ಲಾಟಿನಂ ಪ್ರೀತಿಯ ಅತ್ಯುತ್ತಮ ಸಂಕೇತವಾಗಿ ಗುರುತಿಸಲಾಗುತ್ತದೆ, ಅದು ಅದರ ಅಪರೂಪತೆ, ಶುದ್ಧತೆ ಮತ್ತು ಗಮನಾರ್ಹ ಸದೃಢತೆಗೆ ಸಂಭ್ರಮಿಸಲಾಗುತ್ತದೆ. ಈ ಗುಣಗಳು ಅದನ್ನು ಅತ್ಯಂತ ಅಪೂರ್ವ ಲೋಹವನ್ನಾಗಿಸಿದ್ದು ಅದು ಜೀವನದ ಅತ್ಯಂತ ಗಮನಾರ್ಹ ಮೈಲಿಗಲ್ಲುಗಳನ್ನು ಸಂಭ್ರಮಿಸಲು ಆಯ್ಕೆ ಮಾಡಲಾಗುತ್ತದೆ. ಅದರ ನೈಸರ್ಗಿಕ ಬಿಳುಪು ಕಾಲ ಕಳೆದಂತೆ ಉಳಿದು ಅದರ ಶ್ರೇಷ್ಠತೆಯನ್ನು ಕಾಪಾಡಿಕೊಳ್ಳುತ್ತದೆ. ಇದರ ಸಮ ಯರ ಹಿತ ಆಕರ್ಷಣೆಯು ಈ ಲೋಹದ ಅತ್ಯಂತ ಶುದ್ಧತೆಯೊಂದಿಗೆ ಸೇರಿ ಪ್ಲಾಟಿ ನಂ ಅನ್ನು ಪ್ರತಿನಿತ್ಯ ಧರಿಸುವ ರಿಂಗ್ ಗಳಿಗೆ ಸೂಕ್ತ ಆಯ್ಕೆ ನೀಡಿದ್ದು ಐಷಾರಾಮ ಮತ್ತು ಪ್ರಾಯೋಗಿಕತೆಯನ್ನು ನೀಡು ವುದ ಲ್ಲದೆ ಚರ್ಮಕ್ಕೂ ಮೃದುವಾಗಿರುತ್ತದೆ. ಇದಲ್ಲದೆ ಇದರ ಅಸಾಧಾರಣ ಶ್ರೇಷ್ಠತೆಯು ಆಧುನಿಕ ಸೌಂದರ್ಯಪ್ರಜ್ಞೆಯೊಂದಿಗೆ ಪರಿಪೂರ್ಣವಾಗಿ ಹೊಂದಿಕೊಳ್ಳುತ್ತದೆ. ವಿವಾಹಗಳಿಗೆ ಪ್ಲಾಟಿನಂನ ಶಕ್ತಿ ಮತ್ತು ದೀರ್ಘಬಾಳಿಕೆಯು ಬದ್ಧತೆ ಮತ್ತು ಪಾಲುದಾರಿಕೆಯ ಮೌಲ್ಯಗಳೊಂದಿಗೆ ಆಳವಾಗಿ ಅನುರಣಿಸುತ್ತದೆ. ಹಲವು ದಂಪತಿಗಳು ಅವರ ಒಗ್ಗಟ್ಟನ್ನು ಸಂಕೇತಿಸುವ ಹೊಂದುವ ಪ್ಲಾಟಿನಂ ವಿವಾಹದ ಬ್ಯಾಂಡ್ ಗಳನ್ನು ಆಯ್ಕೆ ಮಾಡುತ್ತಾರೆ. ಪ್ಲಾಟಿನಂ ಎಂಗೇಜ್‌ಮೆಂಟ್ ರಿಂಗ್ ಗಳು ಅವುಗಳ ವಜ್ರಗಳು ಮತ್ತು ಹರಳುಗಳ ಶ್ರೇಷ್ಠತೆಯಿಂದ ಜನಪ್ರಿಯ ಆಯ್ಕೆಯಾಗಿವೆ.

**ಪ್ಲಾಟಿನಂ ಮೈಲಿಗಲ್ಲುಗಳ ಗುರುತು :** ಪ್ಲಾಟಿನಂ ಲವ್ ಬ್ಯಾಂಡ್ ಗಳು ಬರೀ ವಿವಾಹಗಳಿಗೆ ಮಾತ್ರವಲ್ಲ. ಅವು ವಾರ್ಷಿಕೋತ್ಸವಗಳು, ಬಡ್ತಿಗಳು ಮತ್ತು ವೈಯಕ್ತಿಕ ಸಾಧನೆಗಳ ಮೈಲಿಗಲ್ಲುಗಳನ್ನು ಸಂಭ್ರಮಿಸಲು ಆಯ್ಕೆ ಮಾಡಲಾಗುತ್ತದೆ. ಪ್ಲಾಟಿನಂ ವೈವಿಧ್ಯತೆಯು ಹಲವಾರು ಸ್ಟೈಲ್ ಗಳಿಗೆ ಅವಕಾಶ ಕಲ್ಪಿಸುತ್ತದೆ, ಕನಿಷ್ಠಾತ್ಮಕ ವಿನ್ಯಾಸಗಳಿಂದ ಸೂಕ್ಷ್ಮ ಅಲಂಕರಣಗಳವರೆಗೆ ಪ್ರತಿ ವ್ಯಕ್ತಿಯ ಅಭಿರುಚಿಗೂ ಹೊಂದುತ್ತದೆ. ಈ ಪ್ರವೃತ್ತಿಗೆ ಪ್ರಮುಖ ಕಾರಣಗಳಲ್ಲಿ ಒಂದು ಪ್ಲಾಟಿನಂನೊಂದಿಗೆ ಸಂಬಂಧ ಹೊಂದಿರುವ ಭಾವನಾತ್ಮಕ ಮೌಲ್ಯ. ಅದರ ಅಪರೂಪತೆಯು ಚಿನ್ನಕ್ಕಿಂತ 30 ಪಟ್ಟು ಅಪರೂಪದ್ದಾಗಿದ್ದು ಅದನ್ನು ವಿಶಿಷ್ಟ ಮತ್ತು ಅರ್ಥಪೂರ್ಣ ಉಡುಗೊರೆಯಾಗಿಸಿದೆ. ಪ್ಲಾಟಿನಂ ಅದರ ಶುದ್ಧತೆಗೆ ಪ್ರತ್ಯೇಕವಾಗಿ ನಿಲ್ಲುತ್ತದೆ, ಬಹಳಷ್ಟು ಆಭರಣವನ್ನು ಶೇ.95ರಷ್ಟು ಶುದ್ಧ ಪ್ಲಾಟಿನಂನಿಂದ ತಯಾರಿಸಲಾಗಿದ್ದು ಅವು ಇತರೆ ಅಮೂಲ್ಯ ಲೋಹಗಳಿಗಿಂತ ಉನ್ನತ ಮಾನದಂಡ ಹೊಂದಿದೆ.

**ಈಗ ಮತ್ತು ಸದಾ ಅತ್ಯುತ್ತಮ ಆಯ್ಕೆ :** ಪ್ಲಾಟಿನಂ ಲವ್ ಬ್ಯಾಂಡ್ಸ್ ಅನ್ನು ವಿಶೇಷವಾಗಿರಿಸಿರುವುದು ಕಾಲ ಕಳೆದರೂ ಅವುಗಳು ಪ್ರಸ್ತುತವಾಗಿರುವ ಸಾಮರ್ಥ್ಯದಿಂದ. ಪ್ಲಾಟಿನಂ ಲವ್ ಬ್ಯಾಂಡ್ಸ್ ಬರೀ ಧರಿಸುವವರ ಪ್ರಸ್ತುತದ ಸ್ಟೈಲ್ ಪ್ರತಿಫಲನ ಮಾತ್ರವಲ್ಲ, ಬದಲಿಗೆ ಮೌಲ್ಯದ ಸಂಗ್ರಹ ಮತ್ತು ಭವಿಷ್ಯದ ಅರ್ಥವಾಗಿದೆ. ಪ್ರವೃತ್ತಿಗಳು ವಿಕಾಸಗೊಂಡಂತೆ ಪ್ಲಾಟಿನಂನ ಶ್ರೇಷ್ಠತೆ ಮತ್ತು ದೀರ್ಘಬಾಳಿಕೆ ಹೊಳಪನ್ನು ಮುಂದುವರಿಸುವ ಮೂಲಕ ಅದನ್ನು ಪ್ರೀತಿ ಮತ್ತು ಸಂಭ್ರಮಾಚರಣೆಯ ಅತ್ಯುತ್ತಮ ಸಂಕೇತವಾಗಿಸಿದೆ.

**ಎಂದಿಗೂ ಉಳಿಯುವ ಸ್ಟೈಲ್ :** ಪ್ಲಾಟಿನಂ ಲವ್ ಬ್ಯಾಂಡ್ ವಿನ್ಯಾಸಗಳು ಸರಿಸಾಟಿ ಇಲ್ಲದಂತೆ ಸಮಕಾಲೀನ ಟ್ರೆಂಡ್ ಗಳನ್ನು ಸಮಯರಹಿತ ಆಕರ್ಷಣೆಯೊಂದಿಗೆ ಸಂಯೋಜಿಸುತ್ತವೆ. ತೆಳು ಬ್ಯಾಂಡ್ ಗಳು ಬ್ರಷ್ ಮಾಡಲಾದ ಅಥವಾ ಪಾಲಿಷ್ ಮಾಡಲಾದ ಫಿನಿಷ್ ಗಳು ಕನಿಷ್ಠಾತ್ಮಕ ಸ್ಟೈಲ್ ಬಯಸುವವರಿಗೆ ಪರಿಪೂರ್ಣವಾಗಿವೆ, ಸೂಕ್ಷ್ಮ ವಿನ್ಯಾಸಗಳು ಕೆತ್ತನೆಯ ಮಾದರಿಗಳು ಅಥವಾ ವಜ್ರಗಳಿಂದ ಅತ್ಯಾಧುನಿಕತೆಯ ಸ್ಪರ್ಶ ನೀಡುತ್ತವೆ. ಮ್ಯಾಚಿಂಗ್ ರಿಂಗ್ ಬಯಸುವ ದಂಪತಿಗಳಿಗೆ ಡ್ಯುಯಲ್–ಟೋನ್ ಪ್ಲಾಟಿನಂ ಲವ್ ಬ್ಯಾಂಡ್ಸ್ ಅದಕ್ಕೆ ಪೂರಕ ಟೆಕ್ಸ್ ಚರ್ ಗಳೊಂದಿಗೆ ಸಂಪ್ರದಾಯಕ್ಕೆ ಆಧುನಿಕತೆಯ ಟ್ವಿಸ್ಟ್ ನೀಡುತ್ತವೆ. ಪ್ಲಾಟಿನಂನ ಮೃದುತ್ವ ಅದನ್ನು ವಿಶೇಷ ವಿನ್ಯಾಸಗಳಿಗೆ ಸೂಕ್ತವಾಗಿಸಿದ್ದು ಧರಿಸುವವರಿಗೆ ಅವರ ವೈಯಕ್ತಿಕ ಕಥೆಗಳನ್ನು ಬಿಂಬಿಸುವ ಆಭರಣಗಳನ್ನು ಸೃಷ್ಟಿಸಲು ಅವಕಾಶ ಕಲ್ಪಿಸುತ್ತವೆ.

# ಅಣುಬಾಂಬ್ ಸಾಮರ್ಥ್ಯದಿಂದ ಭಾರತಕ್ಕೆ ಜಾಗತಿಕ ಭೂಪಟದಲ್ಲಿ ಸ್ಥಾನ ಕಲ್ಪಿಸಿದ ಕನ್ನಡಿಗ ರಾಜಾರಾಮಣ್ಣ



ಅಣುಬಾಂಬ್ ಸಾಮರ್ಥ್ಯದಿಂದ ಭಾರತಕ್ಕೆ ಜಾಗತಿಕ ಭೂಪಟದಲ್ಲಿ ಸ್ಥಾನ ಕಲ್ಪಿಸಿ, ರಾಷ್ಟ್ರದ ಕೀರ್ತಿ ಪತಾಕೆಯನ್ನು ಎತ್ತಿ ಹಿಡಿದಿದ್ದ ಮಹಾನ್ ವಿಜ್ಞಾನಿ ಕನ್ನಡಿಗ ರಾಜಾರಾಮಣ್ಣ. ಅಮೇರಿಕಾದ ಸಾರ್ವಭೌಮತ್ವ, ಚೀನಾ, ಪಾಕಿಸ್ಥಾನಗಳ ವೈರತ್ವ ಈ ಎಲ್ಲದರ ಸುಳಿಯಲ್ಲಿ ಭಾರತಕ್ಕೆ ಬಲತುಂಬಲು, ಭಾರತದ ಶಕ್ತಿಯನ್ನು ಜಾಗತಿಕವಾಗಿ ಪ್ರದರ್ಶಿಸಲು ರಾಜಾರಾಮಣ್ಣ ಮತ್ತಿತರ ಅಣು ವಿಜ್ಞಾನಿಗಳ ಶ್ರಮ ಗಣನೀಯ.ಇಂದು ಅವರ ಜನ್ಮದಿನ ಇದಕ್ಕೆ ಇಡೀ ದೇಸ ನಮನ ಸಲ್ಲಿಸುತ್ತಿದೆ.

ರಾಜಾಸ್ಥಾನದ ಪೋಖ್ರಾನಲ್ಲಿ 1974 ರಲ್ಲಿ ನಡೆಸಿದ ಪ್ರಪ್ರಥಮವಾಗಿ ಅಣುಪರೀಕ್ಷೆಯ ರೂವಾರಿಯಾಗಿದ್ದ ರಾಜಾ ರಾಮಣ್ಣ. ಆ ಮೂಲಕ ಭಾರತದ ರಕ್ಷಣಾ ವಿಭಾಗಕ್ಕೆ ಆತ್ಮವಿಶ್ವಾಸ ಮೂಡಿಸಿದರು. ರಾಜಾರಾಮಣ್ಣನವರಂಥ ವಿಜ್ಞಾನಿಗಳು ಭಾರತದಲ್ಲಿ ಬಹುಮಂದಿಯಿಲ್ಲ . ವಿಜ್ಞಾನಿಗಳಾದವರು ಸಾಂಸ್ಕೃತಿಕ ಲೋಕದಿಂದ ದೂರವಿರುವುದು ಮಾಮೂಲಿ. ರಾಜಾರಾಮಣ್ಣ ಈ ಮಾತಿಗೆ ಅಪವಾದವಾಗಿದ್ದರು. ಅವರ ಪ್ರತಿಭೆ ವಿಜ್ಞಾನ ಕ್ಷೇತ್ರಕ್ಕಷ್ಟೇ ಸೀಮಿತಗೊಂಡಿರಲಿಲ್ಲ. ಅವರು ಬಹು ಮುಖ ಪ್ರತಿಭೆಯ ಅದು ಬಹುಜನರಿಗೆ ಗೊತ್ತಿಲ್ಲ. ಅಣು ವಿಜ್ಞಾನಿಯಾಗಷ್ಟೇ ಪರಿಚಿತರಾಗಿದ್ದ ಅವರು ಒಳ್ಳೆಯ ಪಿಯಾನೋ ವಾದಕರೂ ಹೌದು. ಸಂಗೀತದ ಬಗೆಗೆ ಅಪಾರ ಆಸಕ್ತಿ ಹೊಂದಿದ್ದರು, ಪಿಯಾನೋ ನುಡಿಸುವುದೆಂದರೆ ಪ್ರಾಣ. ಅದನ್ನವರು ತಮ್ಮ ಆರನೇ ವಯಸ್ಸಿನಲ್ಲಿಯೇ ಆರಂಭಿಸಿದ್ದರು. ಮಂಗಳೂರು ಗಣರಾಜ್ಯೋತ್ಸವಕ್ಕೆ ಮೆರಗು ತಂದಿದ್ದರು. ಬಾಬಾ ಪರಮಾಣು ಅಧ್ಯಯನ ಕೇಂದ್ರದಲ್ಲಿ , ಅಟೋಮಿಕ್ ಎನರ್ಜಿ ಕಮೀಷನಲ್ಲಿ ಮುಖ್ಯಸ್ಥರಾಗಿ ಅವರು ಪರಮಾಣು ಶಕ್ತಿ ವಿಭಾಗದಲ್ಲಿ ಕಾರ್ಯದರ್ಶಿಯಾಗಿ ಸಲ್ಲಿಸಿದ ಸೇವೆ ಅನನ್ಯ. ರಕ್ಷಣಾ ಸಚಿವಾಲಯದ ವಿಜ್ಞಾನ ಮಾರ್ಗದರ್ಶಕರಾಗಿ ಕರ್ತವ್ಯ ನಿರ್ವಹಿಸಿದ್ದಾರೆ. ಮತ್ತೊಂದು ಆಶ್ಚರ್ಯಕರ ಸಂಗತಿಯೆಂದರೆ, ರಾಜಾರಾಮಣ್ಣ ಒಬ್ಬ ಶ್ರೇಷ್ಠ ಲೇಖಕರು ಹೌದು. ಅಣು ವಿಜ್ಞಾನಿಯಾಬ್ಬರು ಸಂಗೀತದಲ್ಲಿ ವಿಶೇಷ ಪಾಂಡಿತ್ಯ ಹೊಂದಿ, ದಿ ಸ್ಟಕ್ಚರ್ ಆಫ್ ಮ್ಯುಸಿಕ್ ಇನ್ ವೆಸ್ಟನ್ ಸಿಸ್ಟಮ್ ಎನ್ನುವ ಸಂಗೀತದ ಪುಸ್ತಕ ರಚಿಸುವುದು ವಿಶೇಷವೇ ಸರಿ.

ಇಯರ್ಸ್ ಆಫ್ ಪಿಲಿಗ್ರಿಮೇಜ್ ಎನ್ನುವುದು ಇವರ ಆತ್ಮಚರಿತ್ರೆಯಲ್ಲಿ ಹಲವು ಕುತೂಹಲ ವಿಷಯ ತಿಳಿಯುತ್ತದೆ.ಕ್ರಿಯಾಶೀಲರಾಗಿದ್ದ ರಾಜಾರಾಮಣ್ಣ ತಮ್ಮ 79ನೇ ವಯಸ್ಸಿನಲ್ಲಿಯೂ, ಬೆಂಗಳೂರಿನಲ್ಲಿರುವ ನ್ಯಾಷನಲ್ ಇನ್ಸಿಟ್ಯೂಟ್ ಆಫ್ ಅಡ್ವಾನ್ಸಡ್ ಸ್ಟಡೀಸ್ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದರು. ಬೆಂಗಳೂರು ರಾಜಾರಾಮಣ್ಣನವರ ಬದುಕಿನ ಅವಿಭಾಜ್ಯ ಅಂಗವಾಗಿತ್ತು . ಇವರ ಸೇವೆಯನ್ನು ಗುರ್ತಿಸಿ ಭಾರತ ಸರಕಾರ ಪದ್ಮಭೂಷಣ, ಪದ್ಮ ವಿಭೂಷಣ ಮತ್ತಿತರ ಪ್ರಶಸ್ತಿಗಳನ್ನು ನೀಡಿ ಗೌರವಿಸಿದೆ. ರಾಜಾರಾಮಣ್ಣನವರು 1925ರ ಜನವರಿ 28ರಂದು ತುಮಕೂರಿನಲ್ಲಿ ಜನಿಸಿದರು. ಮದ್ರಾಸಿನಲ್ಲಿ ಬಿ.ಎಸ್ಸಿ (ಆನರ್ಸ್) ಪದವಿ ಪಡೆದ ನಂತರ 1945ರಲ್ಲಿ ಉನ್ನತ ವ್ಯಾಸಂಗಕ್ಕಾಗಿ ಲಂಡನ್ನಿಗೆ ತೆರಳಿದರು. ಅಲ್ಲಿ ಕಿಂಗ್ಸ್ ಕಾಲೇಜಿನಲ್ಲಿ ಪರಮಾಣು ವಿಜ್ಞಾನ ಅಭ್ಯಾಸ ಮಾಡಿ 1949ರಲ್ಲಿ ಪಿಎಚ್.ಡಿ. ಪಡೆದರು. ತದನಂತರ ಭಾರತಕ್ಕೆ ಮರಳಿದ ರಾಜಾರಾಮಣ್ಣನವರು ಹೋಮಿ ಜಹಂಗೀರ್ ಭಾಬಾರವರೊಡನೆ ಕೆಲಸ ಮಾಡತೊಡಗಿದರು. ಭಾರತದಲ್ಲಿ ಭೌತವಿಜ್ಞಾನದ ಅಭಿವೃದ್ದಿಗಾಗಿ ಶ್ರಮಿಸಿದ ರಾಜಾರಾಮಣ್ಣನವರು, ನ್ಯೂಕ್ಲಿಯರ್ ಫಿಜಿಕ್ಸ್ ವಿಷಯದಲ್ಲಿ ಆಳವಾದ ಸಂಶೋಧನೆ ಕೈಗೊಂಡರು.ರಾಜಾರಾಮಣ್ಣನವರು 1972–1978 ಹಾಗೂ 1981–83 ಅವಧಿಗಳಲ್ಲಿ ಭಾಬಾ ಅಣು ಸಂಶೋಧನಾ ಕೇಂದ್ರದ ನಿರ್ದೇಶಕರಾಗಿದ್ದರು. ರಾಜಾರಾಮಣ್ಣನವರು ರಕ್ಷಣಾ ಮಂತ್ರಾಲಯದ ವೈಜ್ಞಾನಿಕ ಸಲಹೆಗಾರ, ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ (ಡಿ.ಆರ್.ಡಿ.ಒ) ಮಹಾ ನಿರ್ದೇಶಕರಾಗಿ ಹಾಗೂ ರಕ್ಷಣಾ ಸಂಶೋಧನ ಕಾರ್ಯದರ್ಶಿಗಳಾಗಿ ಹೀಗೆ 3 ಹುದ್ದೆ ಗಳನ್ನು ಏಕಕಾಲದಲ್ಲಿ ನಿರ್ವಹಿಸಿದ್ದರು. 1983ರಿಂದ ಪ್ರಾರಂಭಗೊಂಡಂತೆ ಅಣು ಶಕ್ತಿ ಆಯೋಗ (ಎ.ಇ.ಸಿ) ಹಾಗೂ ಭಾರತ ಸರ್ಕಾರದ ಅಣು ಶಕ್ತಿ ವಿಭಾಗದ(ಡಿ.ಎ.ಇ) ಕಾರ್ಯದರ್ಶಿ ಹುದ್ದೆಯನ್ನು ಸಹ ಅಲಂಕರಿಸಿ 1987ರಲ್ಲಿ ನಿವೃತ್ತರಾದರು.

**ದಯಾಮರಣ ಕೋರಿ ಸುಪ್ರೀಂ ಮೆಟ್ಟಿಲೇರಲು ಸಿದ್ದವಾದ ಕೇರಳ ಕುಟುಂಬ**

ತಮ್ಮ ನಿವೃತ್ತಿಯ ನಂತರದಲ್ಲಿ ರಾಜಾರಾಮಣ್ಣನವರು ಬೆಂಗ ಳೂರಿ ನಲ್ಲಿರುವ ರಾಷ್ಟ್ರೀಯ ಪ್ರೌಢ ಅಧ್ಯಯನ ಸಂಸ್ಥೆಯ (ಎನ್.ಐ.ಎ.ಎಸ್) ಅಧ್ಯಕ್ಷರಾಗಿ 1987ರಿಂದ 1989ರ ವರೆಗೆ ದುಡಿದರು. ಅವರ ಅಂತಿಮ ದಿನಗಳವರೆಗೂ ಭಾರತೀಯ ವಿಜ್ಞಾನ ಸಂಸ್ಥೆಯ (ಐ.ಐ.ಎಸ್ಸಿ) ಆಡಳಿತ ಮಂಡಳಿಯ ಅಧ್ಯಕ್ಷರಾಗಿದ್ದರು. ಈ ಮಧ್ಯೆ 1990ರಲ್ಲಿ ರಾಜಾರಾಮಣ್ಣನವರು ವಿ.ಪಿ ಸಿಂಗ್ ಅವರ ಸಂಪುಟದಲ್ಲಿ ಕೆಲಕಾಲ ರಕ್ಷಣಾ ರಾಜ್ಯ ಸಚಿವರೂ ಆಗಿದ್ದರು. 1997ರಲ್ಲಿ ರಾಜ್ಯಸಭೆಗೆ ಆಯ್ಕೆಯಾಗಿದ್ದರು.

ರಾಜಾರಾಮಣ್ಣನವರು ಭಾಬಾ ಅಣು ಸಂಶೋಧನಾ ಕೇಂದ್ರದ ನಿರ್ದೇಶಕರಾಗಿ ಭಾರತದ ಪ್ರಥಮ ಅಣು ಬಾಂಬ್ ಪರೀಕ್ಷೆಯ ಕೀರ್ತಿಗೆ ಭಾಜನರಾಗಿದ್ದಾರೆ. ಪೋಕ್ರಾನ್–1 ಅಥವಾ ಆಪರೇಷನ್ ಸ್ಮೈಲಿಂಗ್ ಬುದ್ಧ ಎಂದು ಕರೆಯಲಾದ ಈ ಕಾರ್ಯಾಚರಣೆಯನ್ನು ಗೌಪ್ಯವಾಗಿ ಹಾಗೂ ಯಶಸ್ವಿಯಾಗಿ ನಡೆಸಿದ ಸಾಧನೆ ರಾಜಾರಾಮಣ್ಣನವರ ಶಕ್ತಿ ಸಾಮಾರ್ಥ್ಯಗಳ ಹಿರಿಮೆಗೆ ಸಾಕ್ಷಿಯೆನಿಸಿದೆ. ಈ ಮಹಾನ್ ಸಾಧಕರಾದ ರಾಜಾರಾಮಣ್ಣನವರು ಸೆಪ್ಟೆಂಬರ್ 24, 2004ರಂದು ಮುಂಬೈನಲ್ಲಿ ನಿಧನರಾದರು.ಈ ಮಹಾನ್ ಸಾಧಕ, ವಿಜ್ಞಾನಿ, ವಿದ್ವಾಂಸ ರಾಜಾ ರಾಮಣ್ಣ ಎಂಬ ಮಹಾನ್ ಚೇತನಕ್ಕೆ ನಮ್ಮ ನಮನ.

# ರಕ್ತ ಶುದ್ಧಿಗೆ ಮನೆ ಮದ್ದು



1. 4 ಚಮಚ ತುಳಸಿ ರಸವನ್ನು ಹಸುವಿನ ಮಜ್ಜಿಗೆಯಲ್ಲಿ ಕದಡಿ ಪ್ರಾತ:ಕಾಲ ಬರೀ ಹೊಟ್ಟೆಯಲ್ಲಿ ಕುಡಿಯುತ್ತಿದ್ದರೆ ರಕ್ತವು ಶುದ್ಧಿ ಯಾಗುವುದು.

2.ಹಸಿಈರುಳ್ಳಿಯನ್ನು ಸೇವಿ ಸುವುದರಿಂದ ಕಬ್ಬಿಣದ ಅಂಶ ಜಾಸ್ತಿ ಆಗಿ ರಕ್ತ ವೃದ್ಧಿಯಾಗುತ್ತದೆ.

3. ಕರಬೂಜ ಹಣ್ಣನ್ನು ಆಗಾಗ್ಗೆ ಸೇವಿಸುತ್ತಿದ್ದರೆ ರಕ್ತ ಶುದ್ಧಿಯಾಗಿರುತ್ತದೆ.

4. ಸೊಗದೆ ಬೇರಿನ ಶರಬತ್ತು ಕುಡಿಯುತ್ತಿದ್ದರೆ ರಕ್ತ ಶುದ್ಧಿಯಾಗುತ್ತದೆ.

5. ಒಣದ್ರಾಕ್ಷಿಯನ್ನು ಚೆನ್ನಾಗಿ ತೊಳೆದು, ನೆನೆಹಾಕಿ ರುಬ್ಬಿಕೊಂಡು ರಸ ತೆಗೆದು ಜೇನುತುಪ್ಪದ ಜೊತೆ ಸೇವಿಸುತ್ತಿದ್ದರೆ ರಕ್ತ ಶುದ್ಧಿ ಹಾಗೂ ರಕ್ತ ವೃದ್ಧಿಯಾಗುತ್ತದೆ.

6. ಬೆಳಿಗ್ಗೆ ಎದ್ದ ತಕ್ಷಣ ಬೆಚ್ಚಗಿನ ನೀರಿಗೆ ನಿಂಬೆಹಣ್ಣು ಹಿಂಡಿಕೊಂಡು 1 ಚಮಚ ಜೇನುತುಪ್ಪದ ಜೊತೆ ಕುಡಿಯುತ್ತಾ ಬಂದರೆ ರಕ್ತಶುದ್ಧಿಯಾಗುತ್ತದೆ.

7. ದಾಳಿಂಬೆ ರಸವನ್ನು ಜೇನುತುಪ್ಪದ ಜೊತೆ ಸೇರಿಸಿ ಸೇವಿಸುತ್ತಿದ್ದರೆ ರಕ್ತ ಶುದ್ಧಿ ಹಾಗೂ ವೃದ್ಧಿಯಾಗುತ್ತದೆ.

8. ಗರಿಕೆ ಹುಲ್ಲಿನ ರಸವನ್ನು ಬೆಳಿಗ್ಗೆ ಬರೀಹೊಟ್ಟೆಯಲ್ಲಿ ಸೇವಿಸುವುದರಿಂದ ರಕ್ತ ಶುದ್ಧಿಯಾಗುತ್ತದೆ.

9. ಬೆಟ್ಟದ ನೆಲ್ಲಿಕಾಯಿಯನ್ನು ಜಜ್ಜಿ ಬೀಜವನ್ನು ಬೇರ್ಪಡಿಸಿ ಜೇನುತುಪ್ಪ ಹಾಕಿ 21 ದಿನಗಳ ಕಾಲ ಮುಚ್ಚಿಡಿ. ನಂತರ ನೆಲ್ಲಿಕಾಯಿ ತುಣುಕುಗಳನ್ನು ತೆಗೆದುಬಿಡಿ. ಪ್ರತಿನಿತ್ಯ 1 ಚಮಚ ಜೇನುತುಪ್ಪವನ್ನು ಸೇವಿಸುತ್ತಾ ಬಂದರೆ 1 ತಿಂಗಳಲ್ಲಿ ರಕ್ತವು ಶುದ್ಧಿಯಾಗುತ್ತದೆ.

10. ಕ್ಯಾರೆಟ್ ಹಾಗೂ ಬೀಟ್‌ರೋಟ್ ರಸವನ್ನು ಪ್ರತಿದಿನ ಬೆಳಿಗ್ಗೆ ಸೇವಿಸುತ್ತಾ ಬಂದರೆ 1 ತಿಂಗಳಲ್ಲಿ ರಕ್ತವು ಶುದ್ಧಿಯಾಗುತ್ತದೆ ಹಾಗೂ ವೃದ್ಧಿ ಯಾಗುತ್ತದೆ.

1. ಗೌರಮ್ಮನ ಆರೋಗ್ಯ ಸೂತ್ರಗಳು ಪ್ರಿಸ್ಮ್ ಬುಕ್ಸ್ ಪ್ರೈವೇಟ್ ಲಿಮಿಟೆಡ್ ವತಿಯಿಂದ ಪ್ರಕಟಣೆ

2. ಡಾ. ಗೌರಿ ಸುಬ್ರಮಣ್ಯ ಆಯುರ್ವೇದ ತಜ್ಞರು ಮತ್ತು ಧರ್ಮದರ್ಶಿಗಳು ಮುಕ್ತಿನಾಗ ದೇವಸ್ಥಾನ ಫೋನ್ ನಂ. 9535383921.

# ದಾಲ್ ಕಾ ಮೀಠಾ



**ಬೇಕಾಗುವ ಸಾಮಗ್ರಿಗಳು:**

ಕಡಲೇಬೇಳೆ 100 ಗ್ರಾಂ

ಹಾಲು 1/2 ಲೀಟರ್

ಬಾದಾಮಿ 100 ಗ್ರಾಂ

ಗೋಡಂಬಿ 100 ಗ್ರಾಂ

ಖೋವಾ 100 ಗ್ರಾಂ

ಕಂಡೆನ್ಸ್ಡ್ ಮಿಲ್ಕ್ 3 ಚಮಚ

ಸಕ್ಕರೆ 1/2 ಕೆಜಿ

ತುಪ್ಪ 2 ಚಮಚ

**ಮಾಡುವ ವಿಧಾನ:** ಬೇಯಿಸಿದ ಕಡಲೇಬೇಳೆಗೆ ಸ್ವಲ್ಪ ಹಾಲು ಹಾಕಿ ರುಬ್ಬಿಕೊಳ್ಳಿ. ಪ್ಯಾನಿಗೆ ತುಪ್ಪ ಹಾಕಿ ಬಿಸಿಯಾದ ಮೇಲೆ ಚಿಕ್ಕದಾಗಿ ಹೆಚ್ಚಿದ ಬಾದಾಮಿ, ಗೋಡಂಬಿ ಹಾಕಿ ಹುರಿಯಿರಿ. ಇದಕ್ಕೆ ರುಬ್ಬಿಕೊಂಡ ಕಡಲೇಬೇಳೆ, ಹಾಲಿನ ಮಿಶ್ರಣ, ಹಾಲು, ತುಪ್ಪ, ಖೋವಾ, ಸಕ್ಕರೆ ಮತ್ತು ಕಂಡೆನ್ಸ್ಡ್ ಮಿಲ್ಕ್ ಹಾಕಿ ಚೆನ್ನಾಗಿ ಬೆರೆಸಿದರೆ ದಾಲ್ ಕಾ ಮೀಠಾ ರೆಡಿ.

# ಅರ್ಹ ಮಹಿಳೆಯರಿಗೆ ತಿಂಗಳಿಗೆ 2,500 ರೂ. ಪಾವತಿ

ನವದೆಹಲಿ,ಮಾ,25–

ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಮೂಲ ಸೌಕರ್ಯ ಅಭಿವೃದ್ಧಿ, ವಿದ್ಯುತ್, ರಸ್ತೆಗಳು, ನೀರು ಸೇರಿ ಪ್ರಮುಖ ಹತ್ತು ಕೇಂದ್ರೀಕೃತ ಕ್ಷೇತ್ರಗಳಿಗೆ ಆದ್ಯತೆ ನೀಡಿ ಭ್ರಷ್ಟಾಚಾರ ರಹಿತ, ಉತ್ತಮ ಆಡಳಿತದ ಸಂಕಲ್ಪದೊಂದಿಗೆ ಸರಿಸುಮಾರು 1 ಲಕ್ಷ ಕೋಟಿ ಗಾತ್ರದ ಮುಂಗಡ ಪತ್ರವನ್ನು ಮುಖ್ಯಮಂತ್ರಿ ರೇಖಾ ಗುಪ್ತಾ ವಿಧಾನಸಭೆಯಲ್ಲಿಂದು ಮಂಡಿ ಸಿದ್ದಾರೆ. ಹಣಕಾಸು ವರ್ಷದ ಬಜೆಟ್ ಅನ್ನು ಮಂಡಿಸಿದ ದೆಹಲಿ ಮುಖ್ಯಮಂತ್ರಿ ಮತ್ತು ಹಣಕಾಸು ಸಚಿವೆ ರೇಖಾ ಗುಪ್ತಾ, ಅರ್ಹ ಮಹಿಳೆಯರಿಗೆ ತಿಂಗಳಿಗೆ 2,500 ಪಾವತಿಸಲು ಸರ್ಕಾರ 5,100 ಕೋಟಿ ಹಣವನ್ನು ನಿಗದಿ ಪಡಿಸಿದೆ ಎಂದು ತಿಳಿಸಿದ್ದಾರೆ. 27 ವರ್ಷಗಳ ನಂತರ ದೆಹಲಿಯಲ್ಲಿ ಬಿಜೆಪಿ ಅಧಿಕಾರ ಹಿಡಿದ ನಂತರ ಮಂಡಿಸುತ್ತಿರುವ ಮೊದಲ ಬಜೆಟ್ ಇದಾಗಿದ್ದು 2025–26ನೇ ಸಾಲಿನ ಮುಂಗಡ ಪತ್ರದಲ್ಲಿ ದೆಹಲಿಯ ಸರ್ವಾಂಗೀಣ ಅಭಿವೃದ್ಧಿ ಮತ್ತು ನಾಗರಿಕರ ರಕ್ಷಣೆಗೆ ಆದ್ಯತೆ ನೀಡುವುದಾಗಿ ಪ್ರಕಟಿಸಿದ್ದಾರೆ.

ಚುನಾವಣಾ ಸಮಯದಲ್ಲಿ ನೀಡಿದ್ದ ಭರವಸೆ ಈಡೇರಿಸಲು ಬಜೆಟ್‌ನಲ್ಲಿ ಆದ್ಯತೆ ನೀಡಲಾಗಿದ್ದು ಮಹಿಳಾ ಸಮೃದ್ಧಿ ಯೋಜನೆಗೆ 5,100 ಕೋಟಿ ರೂ,ದೆಹಲಿಯ ರಸ್ತೆ ಸಾರಿಗೆ ಮತ್ತು ಮೂಲಸೌಕರ್ಯ ಮತ್ತು ಸಂಪರ್ಕದ



ಅಭಿವೃದ್ಧಿಗಾಗಿ 1,000 ಕೋಟಿ ರೂ.ಗಳನ್ನು ಖರ್ಚು ಮಾಡುವುದಾಗಿ ತಿಳಿಸಿದ್ದಾರೆ. ಪ್ರಧಾನ ಮಂತ್ರಿ ಆವಾಸ್ ಯೋಜನೆಗೆ 20 ಕೋಟಿ ರೂ. ಹಂಚಿಕೆ ಮಾಡಿ ದ್ದಾರೆ. ಸರ್ಕಾರ 100 ಸ್ಥಳಗಳಲ್ಲಿ ಅಟಲ್ ಕ್ಯಾಂಟೀನ್‌ಗಳನ್ನು ತೆರೆಯಲಿದೆ ಇದಕ್ಕಾಗಿ ಬಜೆಟ್‌ನಲ್ಲಿ 100 ಕೋಟಿ ರೂ.ಗಳನ್ನು ನಿಗದಿಪಡಿಸಲಾಗಿದೆ. ಜೊತೆಗೆ ರಾಷ್ಟ್ರ ರಾಜಧಾನಿಯಲ್ಲಿ ಮಹಿಳೆಯರ ಸುರಕ್ಷತೆಗಾಗಿ 50,000 ಹೆಚ್ಚುವರಿ ಸಿಸಿಟಿವಿ ಅವಳವಡಿಕೆ, ಜೆಜೆ ಕಾಲೋನಿ ಸೇರಿದಂತೆ ಕೊಳೆಗೇರಿಗಳ ಅಭಿವೃದ್ಧಿ ಅಭಿವೃದ್ಧಿಗೆ 696 ಕೋಟಿ ರೂ ನಿಗದಿ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

“ಈ ಬಜೆಟ್ ದೆಹಲಿಯ ಮೂಲಸೌಕರ್ಯ ಅಭಿ ವೃದ್ಧಿಪಡಿಸಲು ಮಾತ್ರವಲ್ಲ, ಇಡೀ ರಾಷ್ಟ್ರ ರಾಜಧಾನಿಯನ್ನು ಪರಿವರ್ತಿಸಲು. ನಮ್ಮನಿಲುವು ಸಪಷ್ಟವಾಗಿದೆ. ನೀವು ನಮ್ಮನ್ನು ಮತ್ತು ಪ್ರಧಾನಿಯನ್ನು ಟೀಕಿಸಿದ್ದೀರಿ, ಆದರೆ ನಾವು ದೆಹಲಿಯ ಜನರಿಗಾಗಿ ಕೆಲಸ ಮಾಡಲು ಇಲ್ಲಿದ್ದೇವೆ. ನೀವು ಕೇವಲ ಯೋಜನೆಗಳನ್ನು ಘೋಷಿಸಿದ್ದೀರಿ, ಆದರೆ ನಾವು ಅವುಗಳನ್ನು ಕಾರ್ಯಗತಗೊಳಿಸುತ್ತೇವೆ ಎಂದಿ ದ್ದಾರೆ. ಎಎಪಿ ಆಡಳಿತದಲ್ಲಿ ಶೀಶ್ ಮಹಲ್ ಅನ್ನು ನಿರ್ಮಿಸಿದ್ದೀರಿ, ಆದರೆ ನಾವು ಬಡವರಿಗೆ ಮನೆಗಳನ್ನು ನಿರ್ಮಿಸುತ್ತಿದ್ದೇವೆ. ನೀವು 1 ಲಕ್ಷ ರೂ. ಮೌಲ್ಯದ ಶೌಚಾಲಯ ನಿರ್ಮಿಸಿದ್ದೀರಿ, ಆದರೆ ನಾವು ಕೊಳೆಗೇರಿಗಳಲ್ಲಿ ವಾಸಿಸುವ ಜನರಿಗೆ ಸಾವಿರಾರು ಶೌಚಾಲಯಗಳನ್ನು ನಿರ್ಮಿಸುತ್ತೇವೆ ಎನ್ನುವ ಮೂಲಕ ಎಎಪಿ ವಿರುದ್ದ ನೇರ ವಾಗ್ದಾಳಿ ನಡೆಸಿದ್ದಾರೆ. ದೆಹಲಿ ಸರ್ಕಾರವು ಒಳಚರಂಡಿ ಅಭಿವೃದ್ಧಿ, ನೀರು ಶುದ್ಧೀಕರಣ ಮತ್ತು ಯಮುನಾ ನದಿಗೆ 9000 ಕೋಟಿ ರೂ. ಹಂಚಿಕೆ ಮಾಡಿದೆ.ದೆಹಲಿ ಜನರಿಗೆ ಶುದ್ಧ ನೀರು ಒದಗಿಸಲು 9000 ಕೋಟಿ ರೂ ಹಂಚಿಕೆ ಮಾಡಲಾಗಿದ್ದು ಟ್ಯಾಂಕರ್ ಹಗರಣವನ್ನು ಕೊನೆ ಗೊಳಿಸಲು ದೆಲಿಯಲ್ಲಿ ಟ್ಯಾಂಕರ್‌ಗಳಲ್ಲಿ ಜಿಪಿಎಸ್ ಅಳವಡಿಸಲಾಗುವುದು. ಇದನ್ನು ಕಮಾಂಡ್ ಸೆಂಟರ್‌ನಲ್ಲಿ ಮೇಲ್ವಿಚಾರಣೆ ಮಾಡಲಾಗುತ್ತದೆ” ಎಂದು ಅವರು ಹೇಳಿದ್ದಾರೆ.

### 1 ಲಕ್ಷ ಕೋಟಿ ಗಾತ್ರದ ಬಜೆಟ್; ಸಿಎಂ

ಆಯುಷ್ಮಾನ್ ಭಾರತ್ ಯೋಜನೆಯಡಿ ಜನರಿಗೆ ಹೆಚ್ಚುವರಿಯಾಗಿ 5 ಲಕ್ಷ ರೂ. ವಿಮೆ ನೀಡಲು ದೆಹಲಿ ಸರ್ಕಾರ 2,144 ಕೋಟಿ ರೂ. ಹಂಚಿಕೆ ಮಾಡಿದೆ.ಮಹಿಳಾ ಸಮೃದ್ಧಿ ಯೋಜನೆಗೆ 5100 ಕೋಟಿ ರೂ. ಹಂಚಿಕೆ ಮಾಡಲಾಗಿದೆ ಮತ್ತು ಗರ್ಭಿಣಿಯರಿಗೆ 210 ಕೋಟಿ ರೂ. ಹಂಚಿಕೆ ಮಾಡಲಾಗಿದೆ. ದೆಹಲಿಯ 2025–26ರ ಬಜೆಟ್ 1 ಲಕ್ಷ ಕೋಟಿ ರೂ. ಆಗಿದೆ ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ ತಿಳಿಸಿದ್ದಾರೆ. 2025–26ರ ದೆಹಲಿಯ ಬಜೆಟ್ 1 ಲಕ್ಷ ಕೋಟಿ ರೂ. ಆಗಿದೆ. ಈ ಬಜೆಟ್ ಹಿಂದಿನ 2024–25ರ ಹಣಕಾಸು ವರ್ಷಕ್ಕಿಂತ ಶೇ. 31.5 ರಷ್ಟು ಹೆಚ್ಚಾಗಿದೆ. ಕಳೆದ '10 ವರ್ಷಗಳಲ್ಲಿ ದೆಹಲಿಯ ಸ್ಥಿತಿ ಹದಗೆಟ್ಟಿದ್ದು ಸರಿದಾರಿಗೆ ತರಲು ಎಲ್ಲಾ ಪ್ರಯತ್ನ ಮಾಡಲಾಗಿದೆ ಎಂದಿದ್ದಾರೆ. “ಹಿಂದಿನ ಸರ್ಕಾರದ ಅವಧಿಯಲ್ಲಿ ಡಿಟಿಸಿ, ಡಿಯುಎಸ್‌ಐಬಿ, ಕೊಳಕು ನೀರು, ಒಳಚರಂಡಿ, ಹಾಳಾದ ರಸ್ತೆಗಳು ದೆಹಲಿಯ ಮುಖವಾಗಿ ಮಾರ್ಪಟ್ಟಿದ್ದವು. ಹಿಂದಿನ ಸರ್ಕಾರದ ಆಡಳಿತದಲ್ಲಿ ಎಲ್ಲಾ ಇಲಾಖೆಗಳು ನಷ್ಟದಲ್ಲಿದ್ದವು,ಈಗ ಅವುಗಳನ್ನು ಸುಧಾರಿಸಲು ಆದ್ಯತೆ ನೀಡುವುದಾಗಿ ತಿಳಿಸಿದ್ದಾರೆ.

## ಸಂಸ್ಕೃತಿಯನ್ನು ಜಗತ್ತಿಗೆ ಪ್ರದರ್ಶಿಸಲು ಮತ್ತು ಪ್ರಪಂಚದಾದ್ಯಂತದ ಪ್ರವಾಸಿಗರನ್ನು ಆಕರ್ಷಿಸಲು

# ತೆಲಂಗಾಣದಲ್ಲಿ ವಿಶ್ವಸುಂದರಿ ಸ್ಪರ್ಧೆ

**ಹೈದರಾಬಾದ್, ಮಾ. 26:** ಬರುವ ಮೇ ತಿಂಗಳಲ್ಲಿ ತೆಲಂಗಾಣದಲ್ಲಿ ವಿಶ್ವ ಸುಂದರಿ ಸ್ಪರ್ಧೆ ನಡೆಯಲಿದೆ. ವಿಶ್ವಸುಂದರಿ ಸ್ಪರ್ಧೆ ಆಯೋಜನೆಯಿಂದ ರಾಜ್ಯವನ್ನು ಜಾಗತಿಕವಾಗಿ ಪ್ರವಾಸೋದ್ಯಮ ತಾಣವಾಗಿ ಉತ್ತೇಜಿಸಲಿದೆ ಮತ್ತು ಆರ್ಥಿಕ ಚಟುವಟಿಕೆಗಳಿಗೆ ಅನುಕೂಲವಾಗಲಿದೆ ಎಂದು ತೆಲಂಗಾಣ ಪ್ರವಾಸೋದ್ಯಮ ಸಚಿವ ಜುಪಲ್ಲಿ ಕೃಷ್ಣ ರಾವ್ ಹೇಳಿದ್ದಾರೆ. ರಾಜ್ಯ ವಿಧಾನಸಭೆಯಲ್ಲಿ ಪ್ರಸಕ್ತ ಸಾಲಿನ ಅನುದಾನದ ಬೇಡಿಕೆಗಳ ಮತದಾನದ ಮೇಲಿನ ಒಂದು ದಿನದ ಚರ್ಚೆಗೆ ಉತ್ತರಿಸಿದ ಸಚಿವರು. ಪ್ರವಾಸೋದ್ಯಮ ಉತ್ತೇಜನಕ್ಕಾಗಿ ಯುಕೆಗೆ ಭೇಟಿ ನೀಡಿದಾಗ, ತೆಲಂಗಾಣ ಎಲ್ಲಿದೆ ಎಂದು ಕೇಳಲಾಯಿತು ಎಂದು ಹೇಳಿದರು. ವಿಶ್ವದ ಅನೇಕ



ದೇಶಗಳಿಗೆ ತೆಲಂಗಾಣದ ಬಗ್ಗೆ ತಿಳಿದಿಲ್ಲ. ತೆಲಂಗಾಣದ ಸಂಸ್ಕೃತಿಯನ್ನು ಜಗತ್ತಿಗೆ ಪ್ರದರ್ಶಿಸಲು ಮತ್ತು ಪ್ರಪಂಚದಾದ್ಯಂತದ ಪ್ರವಾಸಿಗರನ್ನು ಆಕರ್ಷಿಸಲು ಮಿಸ್ ವರ್ಲ್ಡ್ ಸ್ಪರ್ಧೆಯ ಲಾಭವನ್ನು ಪಡೆಯುವುದು ಯೋಜನೆಯ ಉದ್ದೇಶವಾಗಿದೆ ಎಂದು ರಾವ್ ಹೇಳಿದರು. ಈ ಕಾರ್ಯಕ್ರಮದಲ್ಲಿ 120–140 ದೇಶಗಳ ಪ್ರತಿನಿಧಿಗಳು ಮತ್ತು ಸುಮಾರು 3.500 ಪತ್ರಕರ್ತರು ಭಾಗವಹಿಸಲಿದ್ದಾರೆ ಎಂದು ಅವರು ಹೇಳಿದರು. ಮುಂಬೈನ ಜಿಯೋ ವರ್ಲ್ಡ್ ಸೆಂಟರ್ ಮಾದರಿಯಲ್ಲಿ ಹೈದರಾಬಾದ್‌ನಲ್ಲಿ 20,000 ಜನರ ಸಾಮರ್ಥ್ಯದ ಅಂತರರಾಷ್ಟ್ರೀಯ ಸಮಾವೇಶ ಕೇಂದ್ರವನ್ನು ಸ್ಥಾಪಿಸಲು ರಾಜ್ಯ ಸರ್ಕಾರ ಯೋಜಿಸಿದೆ ಮತ್ತು ಹೈದರಾಬಾದ್ ಕಾರ್ನಿವಲ್ ಅನ್ನು ಆಯೋಜಿಸಲು ಯೋಜಿಸಿದೆ ಎಂದು ಅವರು ಮಾಹಿತಿ ನೀಡಿದರು.

# ಹನಿಟ್ರ್ಯಾಪ್ ಮಾಡಿ ಬ್ಲಾಕ್‌ಮೇಲ್ ಮಾಡುವವರಿಗೆ ಶಿಕ್ಷೆ ಯಾಗಬೇಕು : ಯತೀಂದ್ರ




**ಮೈಸೂರು:** ರಾಜಕಾರಣಿಗಳಿಗೆ ಸಾಕಷ್ಟು ಜನರು ಫೋನ್ ಮಾಡುತ್ತಾರೆ, ಕೆಲವೊಂದು ಬಾರಿ ಯಾರು ಎಂದು ಗೊತ್ತಿಲ್ಲದಿದ್ದರೂ ಸಹ ಫೋನನ್ನು ರಿಸೀವ್ ಮಾಡುತ್ತೇವೆ, ತಂತ್ರಜ್ಞಾನವನ್ನು ದುರುಪಯೋಗಪಡಿಸಿಕೊಂಡು ಹನಿಟ್ರ್ಯಾಪ್ ಮೂಲಕ ಬ್ಲಾಕ್ ಮೇಲ್ ಮಾಡುವವರಿಗೆ ತಕ್ಕ ಶಿಕ್ಷೆಯಾಗಬೇಕು ಎಂದು ವಿಧಾನಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸದನದಲ್ಲಿ ನಮ ಪಕ್ಷದ ಸಚಿವರೇ ಆದ ಕೆ.ಎನ್.ರಾಜಣ್ಣ ಅವರು ಹನಿಟ್ರ್ಯಾಪ್ ವಿಚಾರ ಪ್ರಸ್ತಾಪ ಮಾಡಿದ್ದಾರೆ. ಎಲ್ಲಾ ಪಕ್ಷದ ಶಾಸಕರು ಹಾಗೂ ಸಚಿವರ ಮೇಲೆ ಹನಿಟ್ರ್ಯಾಪ್ ಪ್ರಯತ್ನ ನಡೆದಿದೆ. ಕಳೆದ ಬಿಜೆಪಿ ಸರ್ಕಾರದ ಅವಧಿಯಲ್ಲೂ ಸಹ 17 ಶಾಸಕರು ಹಾಗೂ ಸಚಿವರ ಮೇಲೆ ಹನಿಟ್ರ್ಯಾಪ್ ನಡೆದಿತ್ತು ಎನ್ನಲಾಗಿದೆ. ಈ ವೇಳೆ ಬಹಿರಂಗವಾಗದಂತೆ ನ್ಯಾಯಾಲಯದಿಂದ ತಡೆಯಾಜ್ಞೆಯನ್ನೂ ಸಹ ತರಲಾಗಿತ್ತು. ಆಗ ಬಿಜೆಪಿಯವರೇ ಈ ರೀತಿ ಹನಿಟ್ರ್ಯಾಪ್ ಮಾಡಿದ್ದಾರೆ ಎಂಬ ಆರೋಪ ಕೇಳಿಬಂದಿತ್ತು. ರಾಜಣ್ಣ ಅವರು ಇಂತಹ ಪಕ್ಷದವರೇ ಹನಿಟ್ರ್ಯಾಪ್ ಮಾಡಿದ್ದಾರೆಂದು ಎಲ್ಲಿಯೂ ಹೇಳಿಲ್ಲ. ಅವರು ದೂರು ಕೊಟ್ಟರೆ ತನಿಖೆ ಮಾಡಲಾಗುವುದು. ಈ ಹಿಂದೆ ಬಿಜೆಪಿ ಸರ್ಕಾರದಲ್ಲೂ ಹನಿಟ್ರ್ಯಾಪ್ ನಡೆದಿತ್ತು. ಈಗಲೂ ಅಂತಹ ಪ್ರಯತ್ನ ನಡೆದಿದೆ. ಇದರ ಹಿಂದೆ ದೊಡ್ಡ ಜಾಲವೇ ಇದ್ದು ತನಿಖೆಯ ಮೂಲಕವೇ ಜಾಲವನ್ನು ಪತ್ತೆ ಹಚ್ಚಬೇಕಿದೆ ಎಂದರು.

ತಂತ್ರಜ್ಞಾನವನ್ನು ದುರುಪಯೋಗಪಡಿಸಿಕೊಳ್ಳುವವರು ವಿಡಿಯೋ ಕಾಲ್ ಆನ್ ಮಾಡಿದ ತಕ್ಷಣ ಎಐ ಮೂಲಕ ತಪ್ಪು ವಿಡಿಯೋ ಕಳುಹಿಸಲಾಗುತ್ತದೆ. ನಂತರ ಹನಿಟ್ರ್ಯಾಪ್ ಮಾಡಲಾಗುತ್ತದೆ. ಅಂತವರಿಗೆ ಶಿಕ್ಷೆಯಾಗಬೇಕು. ಹಣ ಹಾಗೂ ಕೆಲಸ ಮಾಡಿಕೊಳ್ಳುವ ಉದ್ದೇಶದಿಂದ ಹನಿಟ್ರ್ಯಾಪ್ ಮಾಡುತ್ತಿದ್ದಾರೆ. ರಾಜಣ್ಣ ಅವರು ಯಾರ ಮೇಲೂ ಆರೋಪ ಮಾಡುತ್ತಿಲ್ಲ. ತನಿಖೆಯಿಂದಷ್ಟೆ ಸತ್ಯಾಸತ್ಯತೆ ಹೊರಬರಬೇಕು. ಆದರೆ ಬಿಜೆಪಿಯವರು ಏಕೆ ಊಹೆ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಹೈಕಮಾಂಡ್‌ಗೆ ನಮ ಪಕ್ಷದ ನಾಯಕರು ಈ ವಿಚಾರವನ್ನು ತಿಳಿಸುತ್ತಾರೆ. ಕೇಂದ್ರ ನಾಯಕರಿಗೆ ನಮ ನಾಯಕರು ದೂರು ಕೊಟ್ಟಿರುವ ಬಗ್ಗೆ ತಿಳಿದಿಲ್ಲ. ರಾಜಣ್ಣ ಅವರು ಸಹ ದೆಹಲಿಗೆ ಹೋಗಿ ದೂರು ಕೊಡಬಹುದು. ಯಾರಾದರೂ ಅವರನ್ನು ಟಾರ್ಗೆಟ್ ಮಾಡಿದರೆ ಅವರ ಮೇಲೆಯೂ ದೂರು ಕೊಡಲಿ ಎಂದರು.

## ಆಸ್ಕರ್ ಪ್ರಶಸ್ತಿ ವಿಜೇತ ಚಿತ್ರದ ಸಹ ನಿರ್ದೇಶಕನನ್ನು ಬಂಧಿಸಿದ ಇಸ್ರೇಲ್



ಜೆರುಸಲೇಂ,ಮಾ.25: ಆಸ್ಕರ್ ಪ್ರಶಸ್ತಿ ವಿಜೇತ ಸಾಕ್ಷ್ಯಚಿತ್ರ ನೋ ಅದರ್ ಲ್ಯಾಂಡ್ ನ ಪ್ಯಾಲೆಸ್ತೀನ್ ಸಹ ನಿರ್ದೇಶಕರೊಬ್ಬರನ್ನು ಇಸ್ರೇಲಿ ಸೇನೆಯು ಬಂಧಿಸಿದೆ. ಅವರನ್ನು ಬಂಧಿಸುವ ಮುನ್ನ ಆಕ್ರಮಿತ ಪಶ್ಚಿಮ ದಂಡೆಯಲ್ಲಿ ಇಸ್ರೇಲಿ ವಸಾಹತುಗಾರರು ಅವರ ಮೇಲೆ ಥಳಿಸಿದ್ದಾರೆ ಎಂದು ಅವರ ಇಬ್ಬರು ಸಹ ನಿರ್ದೇಶಕರು ಮತ್ತು ಇತರ ಸಾಕ್ಷಿಗಳು ತಿಳಿಸಿದ್ದಾರೆ.

ಸುಸಿಯಾ ಗ್ರಾಮದಲ್ಲಿ ಬಂಧನಕ್ಕೊಳಗಾದ ಮೂವರು ಪ್ಯಾಲೆಸ್ತೀನಿಯರಲ್ಲಿ ಚಲನಚಿತ್ರ ನಿಮಾ ಆಸ್ಕರ್ ಪ್ರಶಸ್ತಿ ವಿಜೇತ ಚಿತ್ರದ ಸಹ ನಿರ್ದೇಶಕನನ್ನು ಬಂಧಿಸಿದ ಇಸ್ರೇಲ್‌ಪಕ ಹಮ್ದಾನ್ ಬಲ್ಲಾಲ್ ಕೂಡ ಒಬ್ಬರು ಎಂದು ವಕೀಲ ಲೇಹ್ ಸೆಮ್ಮೆಲ್ ಹೇಳಿದ್ದಾರೆ. ವೈದ್ಯಕೀಯ ಚಿಕಿತ್ಸೆಗಾಗಿ ಅವರನ್ನು ಮಿಲಿಟರಿ ನೆಲೆಯಲ್ಲಿ ಇರಿಸಲಾಗಿದೆ ಎಂದು ಪೊಲೀಸರು ಅವರಿಗೆ ತಿಳಿಸಿದರು ಮತ್ತು ಅವರೊಂದಿಗೆ ಮಾತನಾಡಲು ಸಾಧ್ಯವಾಗಲಿಲ್ಲ ಎಂದು ಅವರು ತಿಳಿಸಿದ್ದಾರೆ.

ಮತ್ತೊಬ್ಬ ಸಹ–ನಿರ್ದೇಶಕ ಬಾಸೆಲ್ ಆದ್ರಾ ಬಂಧನಕ್ಕೆ ಸಾಕ್ಷಿಯಾಗಿದ್ದು, ಸುಮಾರು ಎರಡು ಡಜನ್ ವಲಸಿಗರು ಕೆಲವರು ಮುಖವಾಡ ಧರಿಸಿದ್ದರು. ಕೆಲವರು ಬಂದೂಕುಗಳನ್ನು ಹಿಡಿದಿದ್ದರು. ಕೆಲವರು ಇಸ್ರೇಲಿ ಸಮವಸ್ತ್ರದಲ್ಲಿದ್ದರು ಗ್ರಾಮದ ಮೇಲೆ ದಾಳಿ ನಡೆಸಿದರು ಎಂದು ಹೇಳಿದರು. ಅಲ್ಲಿಗೆ ಬಂದ ಸೈನಿಕರು ತಮ್ಮ ಬಂದೂಕುಗಳನ್ನು ಪ್ಯಾಲೆಸ್ತೀನಿಯರತ್ತ ತೋರಿಸಿದರು, ಆದರೆ ವಸಾಹತುಗಾರರು ಕಲ್ಲುಗಳನ್ನು ಎಸೆಯುವುದನ್ನು ಮುಂದುವರಿಸಿದರು. ನಾವು ಆಸ್ಕರ್ ಪ್ರಶಸ್ತಿಯಿಂದ ಹಿಂತಿರುಗಿದ್ದೇವೆ ಮತ್ತು ಪ್ರತಿದಿನ ನಮ್ಮ ಮೇಲೆ ದಾಳಿ ನಡೆಯುತ್ತಿದೆ. ಚಲನಚಿತ್ರವನ್ನು ಮಾಡಿದ್ದಕ್ಕಾಗಿ ಇದು ನಮ್ಮ ಮೇಲೆ ಅವರ ಸೇಡು ಆಗಿರಬಹುದು. ಇದು ಶಿಕ್ಷೆಯಂತೆ ಭಾಸವಾಗುತ್ತಿದೆ ಎಂದು ಅದ್ರಾ ಟಿ ಹೇಳಿದ್ದಾರೆ.

# ಕೇಂದ್ರ ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರನ್ನು ಭೇಟಿಯಾದ ದೇವೇಗೌಡರು



ನವದೆಹಲಿ: ಹಾಸನ ನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡುವ ಉದ್ದೇಶದಿಂದ ಹಾಸನ ವರ್ತುಲ ರಸ್ತೆ ಯೋಜನೆಗೆ ಒಪ್ಪಿಗೆ ನೀಡಬೇಕು ಎಂದು ಮಾಜಿ ಪ್ರಧಾನಿಗಳು,ರಾಜ್ಯಸಭೆ ಸದಸ್ಯರಾದ ಹೆಚ್.ಡಿ. ದೇವೇಗೌಡ ಅವರು ಕೇಂದ್ರ ಹೆದ್ದಾರಿ ಮತ್ತು ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ಅವರೊಂದಿಗೆ ಮಹತ್ವದ ಮಾತುಕತೆ ನಡೆಸಿದರು. ಸಂಸತ್ ಭವನ ದಲ್ಲಿರುವ ಸಾರಿಗೆ ಸಚಿವರ ಕಚೇರಿಯಲ್ಲಿ ಕೇಂದ್ರ ಸಚಿವರಾದ ಹೆಚ್.ಡಿ. ಕುಮಾರಸ್ವಾಮಿ ಅವರೊಂದಿಗೆ ಗಡ್ಕರಿ ಅವರನ್ನು ಭೇಟಿಯಾದ ಮಾಜಿ ಪ್ರಧಾನಿಗಳು; ಹಾಸನ ಬಹಳ ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ಹಾಗೂ ಕರಾವಳಿ ಮತ್ತು ಒಳನಾಡು ಪ್ರದೇಶಗಳಿಗೆ ಸಂಪರ್ಕ ಕಲ್ಪಿಸುವ ಪ್ರಮುಖ ಕೊಂಡಿಯಾಗಿದೆ. ಹೀಗಾಗಿ ಸಂಚಾರ ದಟ್ಟಣೆ ಕಡಿಮೆ ಮಾಡುವ ಅಗತ್ಯವಿದ್ದು, ವರ್ತುಲ ರಸ್ತೆ ನಿರ್ಮಾಣದ ಅಗತ್ಯ ಬಹಳಷ್ಟಿದೆ ಎಂದು ಹೇಳಿದರು.

ಅಲ್ಲದೆ, ಕರ್ನಾಟಕದ ಮೂಲಸೌಕರ್ಯ ವ್ಯವಸ್ಥೆಯನ್ನು ಉತ್ತಮಪಡಿಸುವ ನಿಟ್ಟಿನಲ್ಲಿ ತಾವು ಮುತುವರ್ಜಿ ವಹಿಸಿ ಕೆಲಸ ಮಾಡುತ್ತಿದ್ದು, ನಾನಾ ಭಾಗಗಳಲ್ಲಿ ಜಾರಿಯಲ್ಲಿರುವ ಯೋಜನೆಗಳನ್ನು ಕ್ಷಿಪ್ರಗತಿಯಲ್ಲಿ ಪೂರ್ಣಗೊಳಿಸಬೇಕು ಎಂದು ಮಾಜಿ ಪ್ರಧಾನಿಗಳು ಸಚಿವರನ್ನು ಕೋರಿದರು. ಹಾಸನ ಹೊರವರ್ತುಲ ರಸ್ತೆ ನಿರ್ಮಾಣಕ್ಕೆ ಸಂಬಂಧಿಸಿ ಸಾರಿಗೆ ಸಚಿವರಿಗೆ ಮನವಿ ಪತ್ರ ನೀಡಿದ ದೇವೇಗೌಡರು; ಯೋಜನೆಗೆ ಅದಷ್ಟು ಬೇಗ ಅನುಮೋದನೆ ನೀಡಬೇಕು ಎಂದು ಕೋರಿದರು.

ಹಾಸನ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ದಟ್ಟಣೆಯನ್ನು ಕಡಿಮೆ ಮಾಡುವಲ್ಲಿ, ಸಂಪರ್ಕವನ್ನು ಸುಧಾರಿಸುವಲ್ಲಿ ಮತ್ತು ಆರ್ಥಿಕ ಚಟುವಟಿಕೆಯನ್ನು ಹೆಚ್ಚಿಸುವಲ್ಲಿ ಪ್ರಸ್ತಾವಿತ ರಿಂಗ್ ರಸ್ತೆಯ ನಿರ್ಣಾಯಕ ಪಾತ್ರವನ್ನು ನಿಯೋಗ ಒತ್ತಿಹೇಳಿತು.

ರಾಜ್ಯದಲ್ಲಿ ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ಎರಡನೇ ಹಂತದ ನಗರವಾದ ಹಾಸನ, ಆರ್ಥಿಕ ಬೆಳವಣಿಗೆ ಮತ್ತು ನಗರ ವಿಸ್ತರಣೆಯಿಂದಾಗಿ ಹೆಚ್ಚುತ್ತಿರುವ ಸಂಚಾರ ದಟ್ಟಣೆ ಸುಗಮ ಸಂಚಾರಕ್ಕೆ ಅಡ್ಡಿಯಾಗಿದೆ. ಹೀಗಾಗಿ ಹೊರ ವರ್ತುಲ ರಸ್ತೆ ಅಗತ್ಯವಾಗಿದೆ. ಈ ಯೋಜನೆಯು ಸಂಚಾರವನ್ನು ವಿಕೇಂದ್ರೀಕರಿಸಿ ದಟ್ಟಣೆಯನ್ನು ಕಡಿಮೆ ಮಾಡುತ್ತದೆ ಹಾಗೂ ಪ್ರಮುಖ ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳಿಗೆ ಸಂಪರ್ಕ ಒದಗಿಸುತ್ತದೆ ಎಂದು ಮಾಜಿ ಪ್ರಧಾನಿಗಳು ಗಡ್ಕರಿ ಅವರಿಗೆ ಮನವರಿಕೆ ಮಾಡಿಕೊಟ್ಟರು.

ಪ್ರಸ್ತಾವಿತ ಹೊರ ವರ್ತುಲ ರಸ್ತೆಯು ಬೆಂಗಳೂರು–ನೆಲಮಂಗಲ–ಮಂಗಳೂರು ರಸ್ತೆ (75) ಅನ್ನು ಹಾಸನ ವಿಮಾನ ನಿಲ್ದಾಣ, ಹಾಸನ–ಅರಸೀಕೆರೆ ರಸ್ತೆ (–71), ಹಾಸನ–ಹಳೇಬೀಡು–ಹಾಸನ ರಸ್ತೆ ಮತ್ತು ಹಾಸನ–ಬೇಲೂರು ರಸ್ತೆ (373) ಗೆ ಸಂಪರ್ಕಿಸುತ್ತದೆ. ಈ ಸಂಪರ್ಕವು ಸುಗಮ ಸಾರಿಗೆಗೆ ಅನುಕೂಲವಾಗುತ್ತದೆ. ಅಲ್ಲದೆ, ಹಾಸನ ಜಿಲ್ಲೆಯಲ್ಲಿರುವ ಯುನೆಸ್ಕೋ ವಿಶ್ವ ಪಾರಂಪರಿಕ ತಾಣಗಳು ಮತ್ತು ರಾಷ್ಟ್ರೀಯ ಪ್ರವಾಸಿ ಸರ್ಕ್ಯೂಟ್ ನ ಭಾಗವಾಗಿರುವ ಹಾಸನ, ಬೇಲೂರು, ಹಳೇಬೀಡು, ಚಿಕ್ಕಮಗಳೂರು, ಶ್ರವಣಬೆಳಗೊಳ, ಮೈಸೂರು, ಮಡಿಕೇರಿ ಮತ್ತು ಮಂಗಳೂರಿನಲ್ಲಿ ಪ್ರವಾಸೋದ್ಯಮವನ್ನು ಉತ್ತೇಜಿಸುತ್ತದೆ ಎಂದು ದೇವೇಗೌಡರು ಕೇಂದ್ರ ಸಾರಿಗೆ ಸಚಿವರಿಗೆ ವಿವರಿಸಿದರು.

### ಯೋಜನೆಯ ವಿವರ:

ಪ್ರಸ್ತಾವಿತ ವರ್ತುಲ ರಸ್ತೆಯ ಒಟ್ಟು ಉದ್ದ 21.950 ಕಿ.ಮೀ. ದೂರವನ್ನು ಹೊಂದಿದ್ದು, ಯೋಜನೆಗೆ ಸುಮಾರು 120 ಹೆಕ್ಟೇರ್ ಭೂಮಿ ಅಗತ್ಯವಿದೆ. ಜಿಎಸ್‌ಟಿ, ಭೂಸ್ವಾಧೀನ ಮತ್ತು ಸ್ಥಳಾಂತರ ಸೇರಿದಂತೆ ಯೋಜನೆಯ ಅಂದಾಜು ವೆಚ್ಚ ಸುಮಾರು 750 ಕೋಟಿ ಆಗಲಿದೆ ಎಂದು ಮಾಜಿ ಪ್ರಧಾನಿಗಳು ಸಾರಿಗೆ ಸಚಿವರಿಗೆ ವಿವರಿಸಿದರು.

ಯೋಜನೆಯ ಆರ್ಥಿಕ ಪರಿಣಾಮದ ಕುರಿತು ವಿವರಿಸಿದ ದೇವೇಗೌಡರು; ಉತ್ತಮ ರಸ್ತೆ ಮೂಲಸೌಕರ್ಯವು ಈ ಪ್ರದೇಶದಲ್ಲಿ ವೇಗಯುತ ಆರ್ಥಿಕ ಬೆಳವಣಿಗೆಗೆ ಕಾರಣವಾಗುತ್ತದೆ. ಈ ವರ್ತುಲ ರಸ್ತೆ ಪ್ರಯಾಣದ ಸಮಯವನ್ನು ಕಡಿಮೆ ಮಾಡುವುದಲ್ಲದೆ; ವ್ಯಾಪಾರ, ಕೃಷಿ ಮತ್ತು ಪ್ರವಾಸೋದ್ಯಮವನ್ನು ಉತ್ತೇಜಿಸುತ್ತದೆ. ಹಾಸನದ ಜನರಿಗೆ ಹೊಸ ಆರ್ಥಿಕ ಅವಕಾಶಗಳನ್ನು ಸೃಷ್ಟಿಸುತ್ತದೆ ಎಂದು ಅವರು ಹೇಳಿದರು. ನಿಯೋಗದಲ್ಲಿ ಮಾಜಿ ಸಚಿವ ಸಂಸದ ಹೆಚ್.ಡಿ. ರೇವಣ್ಣ, ಕೋಲಾರದ ಲೋಕಸಭೆ ಕ್ಷೇತ್ರದ ಸದಸ್ಯ ಎಂ. ಮಲ್ಲೇಶ್ ಬಾಬು, ಮಾಜಿ ಸಚಿವ ಎ.ಮಂಜು, ವಿಧಾನ ಪರಿಷತ್ ಮಾಜಿ ಸದಸ್ಯರಾದ ಕೆ.ಎ. ತಿಪ್ಪೇಸ್ವಾಮಿ, ಚೌಡರೆಡ್ಡಿ ತೂಪಲ್ಲಿ ಅವರಿದ್ದರು.

Owned, Printed and published by **ANILKUMAR H** from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at **MAA FRIENDS PRINTING PRESS,** Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: **ANILKUMAR H**